# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ





ವಿವೇಕಾನಂದ ಜಯಂತಿ ಪ್ರಯುಕ್ತ ಆರೆಸ್ಸೆಸ್ ಸ್ವಯಂಸೇವಕರು ತುಮಕೂರು ಜಿಲ್ಲೆಯ ತಿಪಟೂರಿನ ಬೀದಿಗಳನ್ನು ಸ್ವಚ್ಛಗೊಳಿಸಿದರು.


ಸಂಪುಟ : 36 ಸಂಚಿಕೆ : 13 ಜಯ–ಮಕರ ಕಲಿಯುಗಾಬ್ದ 5116 1–2–2015 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ಮತ್ತೆ ನೆನಪಾಗುವ ಅಮರ ಬಲಿದಾನಿಗಳು

**ಶತಮಾನಗಳ ದಾಸ್ಯದ ಸಂಕೋಲೆಗಳನ್ನು ಕಳಚಿಕೊಂಡು ಸ್ವತಂತ್ರಗೊಂಡ ಭಾರತದ ಸಾರ್ವಭೌಮ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ನಾವಿಂದು ನೆಮ್ಮದಿಯ ಬಾಳ್ವೆಯನ್ನು ಬದುಕುತ್ತಿದ್ದೇವೆಯೆಂದರೆ ಅದರ ಹಿಂದೆ ನಾಡಿನ ಭವಿಷ್ಯಕ್ಕಾಗಿ ತಮ್ಮ ಬದುಕನ್ನೇ ಅರ್ಪಿಸಿದ ಸಹಸ್ರಾರು ಹುತಾತ್ಮರ ಬಲಿದಾನವಿದೆ. ಬೆವರಿನ ಜೊತೆಗೆ ರಕ್ತವನ್ನೂ ಹರಿಸಿದ ಅಂದಿನ ಸ್ವಾತಂತ್ರ್ಯ ಸಮರ ಸೇನಾನಿಗಳು ಹಾಗೂ ಇಂದು ಶತ್ರುವಿನ ಗುಂಡಿಗೆ ಎದೆಯೊಡ್ಡಿ ನಿಂತು ದೇಶದ ರಕ್ಷಣೆಯಲ್ಲಿ ಪ್ರಾಣಾರ್ಪಣೆಗೈಯುತ್ತಿರುವ ವೀರಯೋಧರ ಸರ್ವೋನ್ನತ ತ್ಯಾಗದಿಂದಾಗಿ ಭಾರತ ಸಮೃದ್ಧಿಯ ಪಥದಲ್ಲಿ ಸಾಗಲು ಸಾಧ್ಯವಾಗಿದೆ. ರಾಷ್ಟ್ರಸೇವೆಯಲ್ಲಿ ಹುತಾತ್ಮರಾದ ಮಹನೀಯರ ಸ್ಮರಣೆ ರಾಷ್ಟ್ರವಾಸಿಗಳ ಆದ್ಯ ಕರ್ತವ್ಯ. ಹಾಗೆಯೇ ಅವರ ಬಲಿದಾನ ನಾವು ರಾಷ್ಟ್ರಕ್ಕಾಗಿ ಬದುಕಲು ಸ್ಫೂರ್ತಿಯಾಗಲಿ.**

## ವಾಸುದೇವ ಬಲವಂತ ಫಡಕೆ (1845–1883)



ಮಿಲಿಟರಿ ಸರಬರಾಜು ಇಲಾಖೆಯಲ್ಲಿ ನೌಕರನಾಗಿದ್ದ ಫಡಕೆ, 1876ರಲ್ಲಿ ಮಹಾರಾಷ್ಟ್ರದಲ್ಲಿ ಭೀಕರ ಬರಗಾಲ ಉಂಟಾದ ಸಮಯದಲ್ಲಿ ಬ್ರಿಟಿಷ್ ಸರಕಾರ ನಡೆದುಕೊಳ್ಳುತ್ತಿದ್ದ ರೀತಿಯಿಂದ ಆಕ್ರೋಶಗೊಂಡು ಸಶಸ್ತ್ರ ಕ್ರಾಂತಿಯ ಮಾರ್ಗದೆಡೆಗೆ ಹೊರಳಿದರು. ಮಹಾರ್, ಮಾಂಗ, ರಾಮೋಶಿ, ಭಿಲ್ಲ, ಕೋಳಿ ಮುಂತಾದ ಸಾಮಾನ್ಯ ಜಾತಿಯವರನ್ನೆಲ್ಲ ಒಟ್ಟು ಸೇರಿಸಿ ಒಂದು ಸೈನ್ಯವನ್ನು ಸಜ್ಜುಗೊಳಿಸಿದರು. ದೇಶವನ್ನು ಸ್ವತಂತ್ರಗೊಳಿಸಲು ಆರ್ಥಿಕ ನೆರವಿನ ಅಗತ್ಯಬಿದ್ದಾಗ ಜಮೀನುದಾರರ, ಸಾಹುಕಾರರ ಮೇಲೆ ದಾಳಿ ನಡೆಸಿ ಧನವನ್ನು ಸಂಗ್ರಹಿಸಿದರು. ಇದಕ್ಕೆ ಮನಃಸಾಕ್ಷಿ ಒಪ್ಪದೇ ಆ ಮೊತ್ತಕ್ಕೆ ವಚನ ಚೀಟಿಯನ್ನು (ಪುನಃ ಪಾವತಿಸುವ, ಸಾಲ ತೀರಿಸುವ ವಚನ) ಬರೆದು ಕೊಟ್ಟರು. ಫಡಕೆಯ ಹೋರಾಟದಿಂದ ಬೇಸತ್ತ ಬ್ರಿಟಿಷ ಸರಕಾರ ಅವರನ್ನು ಹಿಡಿದುಕೊಟ್ಟವರಿಗೆ ನಾಲ್ಕು ಸಾವಿರ ರೂಪಾಯಿಗಳ ಬಹುಮಾನವನ್ನು ಘೋಷಿಸಿತು. ಆದರೆ ಫಡಕೆ, ಅದಕ್ಕಿಂತಲೂ ದೊಡ್ಡ ಮೊತ್ತದ ಬಹುಮಾನವನ್ನು ಗವರ್ನರ್ ಮತ್ತು ಜಿಲ್ಲಾಧಿಕಾರಿಗಳ ತಲೆಗೆ ಘೋಷಿಸಿದರು. ಸರಕಾರ ಫಡಕೆಯನ್ನು ಬಂಧಿಸಲು 1800 ಸೈನಿಕರನ್ನು ನಿಯೋಜಿಸಿತು. ಇದು ಕೈಗೂಡಲಿಲ್ಲ. ಆದರೆ ದುರ್ದೈವವಶಾತ್ ಒಬ್ಬ ಪರಿಚಿತ ಸ್ತ್ರೀಯು ವಾಸುದೇವರಾಯರನ್ನು ಗಾಣಗಾಪುರದಲ್ಲಿ ನೋಡಿದ ಬಗ್ಗೆ ಪುಣೆಯ ಒಂದು ದೇವಸ್ಥಾನದಲ್ಲಿ ಇನ್ನೊಬ್ಬ ಹೆಂಗಸಿಗೆ ತಿಳಿಸಿದಳು. ಅದನ್ನು ಕೇಳಿದ ಒಬ್ಬ ಜಮೀನುದಾರನ ಹೆಂಡತಿಯು ತನ್ನ ಪತಿಗೆ ವಾಸುದೇವರಾಯರನ ಸುಳಿವು ತಿಳಿಸಿದಳು. ಬಹುಮಾನದ ಆಸೆಗೆ ಬಿದ್ದ ಆತ ಈ ಸುದ್ದಿಯನ್ನು ಫಡಕೆಯನ್ನು ಹಿಡಿಯಲು ನೇಮಿಸಲ್ಪಟ್ಟಿದ್ದ ಮೇಜರ್ ಡೆನಿಯಲ್‌ಗೆ ತಿಳಿಸಿದ. ಜುಲೈ 20ರಂದು ತಡರಾತ್ರಿಯಂದು ಒಂದು ದೇವಸ್ಥಾನದಲ್ಲಿ ಮಲಗಿದ್ದ ಫಡಕೆಯನ್ನು ಬ್ರಿಟಿಷರು ಮೋಸದಿಂದ ಬಂಧಿಸಿ ಜೀವಾವಧಿ ಶಿಕ್ಷೆಯನ್ನು ವಿಧಿಸಿದರು. ಕಾರಾಗೃಹವಾಸದಲ್ಲಿ ಅಮಾನುಷವಾಗಿ ನಡೆಸಿಕೊಂಡಿತು. ಆದರೆ ಅಕ್ಟೋಬರ್ 12, 1880ರಂದು ಬೆಳಗ್ಗೆ ಕೈಕಾಲುಗಳಿಗೆ ತೊಡಿಸಿದ್ದ ಬೇಡಿಗಳನ್ನು ಕಿತ್ತೊಗೆದು ಕೊಠಡಿಯ ಬೀಗವನ್ನು ಮುರಿದು ಸೆರೆಮನೆಯ ಗೋಡೆಯಿಂದ ಜಿಗಿದು ಅವರು 12 ಮೈಲುಗಳಷ್ಟು ದೂರ ಬರಿಗಾಲಿನಲ್ಲಿ ಓಡುತ್ತಾ ತಪ್ಪಿಸಿಕೊಂಡ. ಮತ್ತೊಮ್ಮೆ ಬಂಧಿಸಲಾಯಿತು. ಕೈಕಾಲುಗಳಿಗೆ ದಪ್ಪನಾದ ಬೇಡಿ ಹಾಕಿ ಕೂಡಿಹಾಕಿ ನರಕಯಾತನೆ ನೀಡಿತು. ಅನಂತರದ ಎರಡು ವರ್ಷಗಳಲ್ಲಿ ಅವರಿಗೆ ಎಷ್ಟೊಂದು ಚಿತ್ರಹಿಂಸೆ ನೀಡಲಾಯಿತು ಎಂದರೆ ಕಟ್ಟುಮಸ್ತಾದ ಶರೀರವು ಸೊರಗಿಹೋಗಿ ಜರ್ಜರಿತವಾಯಿತು. ಆ ಮಹಾನ್ ಕ್ರಾಂತಿಕಾರಿಯ ದಿವ್ಯದೇಹಕ್ಕೆ ರಕ್ತಕ್ಷಯ ಹತ್ತಿತು. ದಿನದಿನವೂ ಸೊರಗುತ್ತಾ ಕೊನೆಗೆ ಫೆಬ್ರುವರಿ 17, 1883ರಂದು ಆ ಶ್ರೇಷ್ಠಕ್ರಾಂತಿಕಾರನು ಹಿಂದೂಸ್ಥಾನದ ಸ್ವಾತಂತ್ರ್ಯ ಹೋರಾಟದಲ್ಲಿ ಆಹುತಿಯಾದನು. ವಾಸುದೇವ ಬಲವಂತ ಫಡಕೆಯವರು ಹಚ್ಚಿದ ಈ ರಾಷ್ಟ್ರಯಜ್ಞದಿಂದಲೇ ಹಿಂದೂಸ್ಥಾನದಾದ್ಯಂತ 1857ರ ಸಂಗ್ರಾಮದ ನಂತರ ಬತ್ತಿ ಹೋದಂತಿದ್ದ ಕ್ರಾಂತಿಯ ಜ್ವಾಲೆಯನ್ನು ಮತ್ತೊಮ್ಮೆ ಧಗಧಗಿಸುವಂತೆ ಮಾಡಿತು.

## ವೀರ ಪಾಂಡ್ಯ ಕಟ್ಟಬೊಮ್ಮನ್

ಅದು ತಮಿಳುನಾಡಿನ ರಾಮನಾಥಪುರಂ ಜಿಲ್ಲೆಯ ಪಾಂಚಾಲಂಕುರುಚ್ಚಿ ಪ್ರಾಂತ. ಪಾಂಡ್ಯರಾಜ ಜಗವೀರ ಅದರ ಆಳ್ವಿಕೆ ನಡೆಸುತ್ತಿದ್ದವ. ವೃದ್ಧನಾಗಿದ್ದ ಪಾಂಡ್ಯರಾಜನಿಗೆ ತನ್ನ ನಂತರ ಅತ್ಯಂತ ಸಮರ್ಥವಾಗಿ ತನ್ನ ಪ್ರಜೆಗಳನ್ನು ನೋಡಿಕೊಳ್ಳುವನೆಂಬ ವಿಶ್ವಾಸ ಆತನ ಮಗನಾದ ಕಟ್ಟಬೊಮ್ಮನ ಮೇಲಿತ್ತು. ಹೀಗಾಗಿ ಚಿಕ್ಕಂದಿನಿಂದಲೇ ಆತನನ್ನು ಸೈನ್ಯ ಹಾಗೂ ಆಡಳಿತ ಎರಡರಲ್ಲೂ ತೊಡಗಿಸಿದ್ದ. ಕಟ್ಟಬೊಮ್ಮನ್ ತನ್ನ ಪ್ರಾಂತ್ಯದ ಸುತ್ತ ಬಲವಾದ ಕೋಟೆಯೊಂದನ್ನು ನಿರ್ಮಿಸಿ, ರಾಜಧಾನಿಯನ್ನು ಸುಂದರ ನಗರವನ್ನಾಗಿ ಅಭಿವೃದ್ಧಿಗೊಳಿಸಿದ. ಹೀಗೆ ಕೇವಲ 33ನೇ ವಯಸಿನಲ್ಲಿ ರಾಜ್ಯದ ನೊಗಹೊತ್ತ ಕಟ್ಟಬೊಮ್ಮನಿಗೆ ವೀರಶೂರರನ್ನು ಗುರುತಿಸಿ ಗೌರವಿಸುವ ಗುಣ ಮತ್ತು ಅಕ್ರಮ ಅನ್ಯಾಯಗಳೆಸಗುವವರನ್ನು ಶಿಕ್ಷಿಸಿ ಸರಿದಾರಿಗೆ ತರುವ ಕಠಿಣತೆ ಎರಡೂ ಇತ್ತು. ಈ ತನ ಆಶ್ರಯದಲ್ಲಿ ಪ್ರಜೆಗಳು ನೆಮ್ಮದಿಯನ್ನು ಕಾಣತೊಡಗಿದ್ದರು. 18ನೇ ಶತಮಾನದ ಕೊನೆಯಲ್ಲಿ ಅನೇಕ ಸಣ್ಣಪುಟ್ಟ ರಾಜರು, ಪಾಳೇಗಾರರು ದಕ್ಷಿಣ ಭಾರತದಾದ್ಯಂತ ಹರಡಿದ್ದರು. ಬಹುಪಾಲು ಇವರೆಲ್ಲರೂ ಅರ್ಕಾಟ್‌ನ ನವಾಬನ



ಅಧೀನದಲ್ಲಿ ಸ್ವತಂತ್ರ ರಾಜ ರಂತೆ ಆಳ್ವಿಕೆ ಮಾಡುತ್ತಿದ್ದರು. ಆದರೆ ಅರ್ಕಾಟಿನ ವಿಲಾಸಿ ನವಾಬನಿಗೆ ಆಡಳಿತ ನಡೆಸುವ ಕ್ಷಮತೆಯಾಗಲೀ; ಕುಟಿಲತೆಯಿಂದ ಒಂದೊಂದೇ ಪ್ರದೇಶಗಳನ್ನು ಆಕ್ರಮಿಸಿ ಕೊಳ್ಳುತ್ತಿದ್ದ ಬ್ರಿಟೀಷರನ್ನು ಎದುರಿಸುವ ಶಕ್ತಿಯಾಗಲೀ ಇರಲಿಲ್ಲ. ಈ ಭಯದಿಂದ 1792ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯೊಂದಿಗೆ ನವಾಬನು ಒಪ್ಪಂದ ಮಾಡಿಕೊಂಡು ಕಪ್ಪ ವಸೂಲಿ ಮಾಡುವ ಅಧಿಕಾರವನ್ನು ಕಂಪೆನಿಗೆ ನೀಡಿದ. ಹೀಗೆ ಕಟ್ಟಬೊಮ್ಮನ ರಾಜ್ಯದ ಸುತ್ತಮುತ್ತಲಿದ್ದ ಅನೇಕ ಪಾಳೇಗಾರರನ್ನು ಕುತಂತ್ರಗಳಿಂದ ದಂಡಿಸಿ, ಶರಣಾಗತರಾಗುವಂತೆ ಮಾಡಿ ಕಪ್ಪ ವಸೂಲಿ ಮಾಡತೊಡಗಿತು. ಆದರೆ ಕಟ್ಟಬೊಮ್ಮನ್ ಮಾತ್ರ ಕಪ್ಪಕೊಡಲು ಒಪ್ಪಲಿಲ್ಲ. 'ವಿದೇಶಿಯರಾದ ನಿಮಗೆ ಒಂದು ಬಿಡಿಗಾಸನ್ನೂ ನೀಡುವುದಿಲ್ಲ, ತನ್ನ ರಾಜ್ಯದಲ್ಲಿ ನಿಮಗೆ ಪ್ರವೇಶವೂ ಇಲ್ಲ' ಎಂದು ಮಾರುತ್ತರ ನೀಡಿದ. ಕಂಪೆನಿಯು ಉಳಿದ ಪಾಳೇಗಾರರನ್ನು ಬೊಮ್ಮನ ವಿರುದ್ಧ ಎತ್ತಿಕಟ್ಟಲು ಪ್ರಯತ್ನಿಸಿ ವಿಫಲವಾಯಿತು. ಕಡೆಗೆ ಕುತಂತ್ರದಿಂದ ತನ್ನ ಆಸ್ಥಾನಕ್ಕೆ ಕರೆಸಿಕೊಂಡ ಆಂಗ್ಲ ಅಧಿಕಾರಿ ಜಾಕ್ಸನ್‌ನು ಶರಣಾಗುವಂತೆ ಬೆದರಿಕೆಯೊಡ್ಡಿದ. ಆದರೆ ಬಂಧಿಸಲು ಬಂದ ಬ್ರಿಟೀಷ್ ಅಧಿಕಾರಿಯ ಸೈನಿಕರನ್ನೇ ಯುಮಸದನಕ್ಕಟ್ಟಿ ತನ್ನ ಹತ್ತಾರು ಸೈನಿಕರೊಡನೆ ಅಲ್ಲಿಂದ ತಪ್ಪಿಸಿಕೊಂಡ.

ಅವಮಾನಗೊಂಡ ಕಂಪೆನಿ ಸರಕಾರ 1797ರ ಆಗಸ್ಟ್ ತಿಂಗಳಲ್ಲಿ ಮೇಜರ್ ಜಾನ್ ಬ್ಯಾನರ್‌ಮನ್ ಎಂಬುವನ ನೇತೃತ್ವದಲ್ಲಿ ಸೈನ್ಯ ಕಳುಹಿಸಿತು. ಇದಕ್ಕೆ ಆಂಗ್ಲರ ಕೈಗೊಂಬೆಗಳಂತಿದ್ದ ಸುತ್ತಲಿನ ನಾಲ್ಕಾರು ಪಾಳೇಗಾರರು ನಾಚಿಕೆಯಿಲ್ಲದೇ ಜೊತೆಗೂಡಿದರು. ಯುದ್ಧ ಆರಂಭಗೊಂಡಿತು. ಕಟ್ಟಬೊಮ್ಮನ ಸೋದರ ಉಮ್ಮೈದೊರೆ ಮೂಕನಾದರೂ ಮಹಾ ಪರಾಕ್ರಮಿ. ಆಂಗ್ಲ ಸೇನಾಪತಿ ಕಾಲಿನ್ಸ್‌ನ ರುಂಡಮುಂಡಗಳನ್ನು ಬೇರ್ಪಡಿಸಿದ. ಬೆಚ್ಚಿದ ಆಂಗ್ಲರು ಮತ್ತಷ್ಟು ಸೈನ್ಯವನ್ನು ಒಂದುಗೂಡಿಸಿ ದಾಳಿ ಮಾಡಿದರು. ಕಟ್ಟಬೊಮ್ಮ ಮತ್ತು ಸೈನಿಕರು ರುದ್ರದೇವನ ಅವತಾರದಂತೆ ಶತ್ರು ಸೇನೆಯೊಂದಿಗೆ ಹೋರಾಡಿತು. ಕೋಟೆಯ ದ್ವಾರಗಳು ಧ್ವಂಸವಾಗಿದವು. ಶತ್ರು ಸೇನೆ ಪಾಂಚಾಲಂ ಕುರುಚ್ಚಿ ಕೋಟೆಯ ಒಳ ನುಗ್ಗಿತು. ಈಗ ಬೊಮ್ಮನ ಸೈನಿಕರ ಬಳಿ ಇದ್ದದ್ದು ಕತ್ತಿ, ಗುರಾಣಿಗಳು ಮತ್ತು ಅಮಿತೋತ್ಸಾಹದಿಂದ ಹೋರಾಟದ ಕೆಚ್ಚು ಮಾತ್ರ. ಚಾಣಾಕ್ಷತನದಿಂದ ತಪ್ಪಿಸಿಕೊಂಡ ಬೊಮ್ಮನಾಯಕನು ಕೋಲಾರ್‌ಪಟ್ಟಿಯ ಪಾಳೇಗಾರನಲ್ಲಿ ಆಶ್ರಯ ಪಡೆದ. ಬ್ರಿಟಿಷರು ಬೊಮ್ಮನನ್ನು ಹಿಡಿದು ಕೊಟ್ಟವರಿಗೆ ಭಾರಿ ಮೊತ್ತದ ಬಹುಮಾನವನ್ನು ಘೋಷಿಸಿತು. ಬ್ರಿಟಿಷರು ಬೊಮ್ಮನ ಮಂತ್ರಿ ತಾನಾಪತಿಯನ್ನು ಹಿಡಿದು ಗಲ್ಲಿಗೇರಿಸಿದರು. ಬೊಮ್ಮನ ಹೆಂಡತಿ ಮಕ್ಕಳನ್ನು ಸೆರೆಯಲ್ಲಿರಿಸಿದರು. ಬೊಮ್ಮ ಸಂಗಡಿಗರೊಡನೆ ಪುದುಕೋಟ್ಟೈನ ಕಾಡನ್ನು ಪ್ರವೇಶಿಸಿದ. ಇದನ್ನು ಅರಿತ ಅಲ್ಲಿನ ಪಾಳೇಗಾರ ತೊಂಡೈಮಾನ್ ನಯವಾದ ಮಾತುಗಾರಿಕೆಯಿಂದ ಸಹಕರಿಸುವ ಆಶ್ವಾಸನೆ ನೀಡಿ ತನ್ನ ಕೋಟೆಗೆ ಕರೆಸಿಕೊಂಡು ಮೋಸದಿಂದ ಬೊಮ್ಮನನ್ನು ಬಂಧಿಸಿ ಕಂಪನಿಯ ಸೈನಿಕರಿಗೊಪ್ಪಿಸಿದನು. ಬಂಧಿಯಾಗಿ ಸೆರೆಸಿಕ್ಕ ಬೊಮ್ಮನಲ್ಲಿ 'ನಿನ್ನ ತಪ್ಪುಗಳನ್ನು ಒಪ್ಪಿಕೊಂಡಲ್ಲಿ ಕ್ಷಮಿಸುವುದಾಗಿ ಕೋರಿದ. ಆದರೆ ಸ್ವಾಭಿಮಾನಿ ಬೊಮ್ಮ ತನ್ನ ಉಗ್ರಮಾತುಗಳಿಂದ ತಿರಸ್ಕರಿಸಿದ. ಬ್ರಿಟಿಷರು ಎಲ್ಲ ಪಾಳೇಗಾರರ ಸಮ್ಮುಖದಲ್ಲಿ ಸಾರ್ವಜನಿಕವಾಗಿ ಕಟ್ಟಿಬೊಮ್ಮನನ್ನು ಗಲ್ಲಿಗೇರಿಸುವ ಸಿದ್ಧತೆ ಮಾಡಿದ. ಬೊಮ್ಮ ನೆಲದ ಮೇಲಿನ ಮಣ್ಣನ್ನು ಎತ್ತಿಕೊಂಡು 'ಅಮ್ಮಾ ಮತ್ತೊಮ್ಮೆ ನಾನು ಇದೇ ಮಣ್ಣಿನಲ್ಲಿ ಹುಟ್ಟುತ್ತೇನೆ. ನಿನ್ನನ್ನು ಸ್ವತಂತ್ರಗೊಳಿಸುತ್ತೇನೆ' ಎಂದು ತಾಯಿ ಭಾರತಿಗೆ ವಾಗ್ದಾನವಿತ್ತು ಶಾಂತನಾಗಿ ನೇಣಿಗೆ ಕೊರಳೊಡ್ಡಿದ. ಈಗಲೂ ತಮಿಳುನಾಡಿನ ಅನೇಕ ತಾಯಂದಿರು ಪಾಂಚಾಲ ಕುರುಚ್ಚಿಯ ಮಣ್ಣನ್ನು ಹಾಲಿನಲ್ಲಿ ಕಲೆಸಿ ತಮ್ಮ ಮಕ್ಕಳಿಗೆ ಕುಡಿಸುತ್ತಾರೆ, ತನ್ನ ಕಂದ ಆ ಮಹಾ ವೀರನಂತಾಗಲಿ ಎಂದು ಬೇಡಿಕೊಳ್ಳುತ್ತಾರೆ.

## ಜತಿನ್ ದಾಸ್



ಬಂಗಾಳದ ಹುಡುಗ. ಬಾಲ್ಯದಿಂದ ಪ್ರೌಢಾವಸ್ಥೆಗೆ ಹೊಗುವಷ್ಟರಲ್ಲಿ ಅನುಶೀಲನಾ ಸಮಿತಿಗೆ ಸೇರ್ಪಡೆಗೊಂಡು ರಾಷ್ಟ್ರೀಯ ವಿಚಾರಗಳಿಂದ ಪ್ರೇರಿತನಾಗಿ ಬ್ರಿಟೀಷರ ವಿರುದ್ಧ ಬುಸುಗುಟ್ಟಲು ಶುರುಮಾಡಿದ್ದ. ಪರಂಗಿಗಳಿಂದ ನಿದ್ರೆ ಬೀಳದಂತೆ ಮಾಡಿಬಿಟ್ಟ ಜತಿನ್‌ದಾಸ್‌ನನ್ನು ಬಗ್ಗುಬಡಿಯಬೇಕೆಂದು ಬ್ರಿಟೀಷ್ ಸರಕಾರ ಅವನನ್ನು ಬಂಧಿಸಿತು. ಸೆರೆಮನೆಯಲ್ಲಿ ಸೇರಿದ ಜತಿನ್ ನೇರ ಬಾಂಬು ತಯಾರಿಸುವರ ಬಳಿಯಲ್ಲಿ ಸಖ್ಯ ಬೆಳೆಸಿಕೊಂಡ. ಹೊರಗಡೆ ಬಂದು ಲಾಹೋರ್ ಹೋರಾಟದಲ್ಲಿ ಮಿಂಚಿನಂತೆ ತೊಡಗಿಸಿಕೊಂಡು ಮತ್ತೊಮ್ಮೆ ಸೆರೆಯಾದ. ಬ್ರಿಟೀಷರ ದಬ್ಬಾಳಿಕೆ ಜೈಲಿನಲ್ಲಿಯೂ ಮುಂದುವರಿದಿತ್ತು. ಅನ್ನಹಾರಗಳನ್ನು ಸರಿಯಾಗಿ ಕೊಡದೆ, ಸ್ವಚ್ಛತೆಗಳನ್ನು ಧಿಕ್ಕರಿಸಿ ಅಹಂಕಾರ ಮೆರೆಯುತ್ತಿದ್ದವರ ವಿರುದ್ಧ ಜತಿನ್ ಸಮರಕ್ಕೆ ನಿಂತು ಅನೇಕ ದಿನಗಳ ಕಾಲ ನಿರಂತರ ಉಪವಾಸ ಸತ್ಯಾಗ್ರಹ ಮಾಡಿದ. 1929 ಸೆಪ್ಟೆಂಬರ್ 13ರಂದು ಇಡೀ ಕೋಲ್ಕತ್ತಾ ನಗರ ನಿಂತಲ್ಲಿಯೇ ಸ್ತಬ್ದಗೊಂಡಿತು. ಜನ ಮೈಲುಗಟ್ಟಲೆ ದೂರಕ್ಕೆ ಹೃದಯ ಹಿಡಿದುಕೊಂಡು ನಿಂತರು. ಬ್ರಿಟಿಷರ ಅನಾಚಾರವನ್ನು ವಿರೋಧಿಸಿ ಉಪವಾಸಕ್ಕೆ ಕುಳಿತಿದ್ದ ಜತಿನ್‌ದಾಸ್ ಪ್ರಾಣಾರ್ಪಣೆ ಮಾಡಿದ್ದರು. ಆಗ ಜತಿನ್‌ದಾಸ್‌ರ ವಯಸ್ಸು ಕೇವಲ 24.

(3ನೇ ಪುಟಕ್ಕೆ)

# ಸಮರ್ಥ ಭಾರತ

## ಒಂದು ಗುರಿ - ಹಲವು ದಾರಿ

# ವಿಶೇಷ ಚೇತನರ ಕ್ಷೇಮಾಭಿವೃದ್ಧಿ

2011ರ ಜನಗಣತಿಯ ಅಂಕಿಅಂಶಗಳ ಪ್ರಕಾರ ಭಾರತದ ಜನಸಂಖ್ಯೆಯ ಸುಮಾರು 2.6 ಕೋಟಿ (2.26%) ವ್ಯಕ್ತಿಗಳು ವಿವಿಧ ರೀತಿಯ ಅಂಗವೈಕಲ್ಯಗಳಿಂದ ಬಳಲುತ್ತಿದ್ದಾರೆ. ಕರ್ನಾಟಕದಲ್ಲಿ ಅಂದಾಜು 9.4 ಲಕ್ಷ ಅಂತಹ ವಿಶೇಷ ಚೇತನರಿದ್ದು ಅವರು ಸಂಖ್ಯೆ ದೃಷ್ಟಿ, ಶ್ರವಣ, ಮಾನಸಿಕ ನ್ಯೂನತೆ, ಚಲನವಲನ ನ್ಯೂನತೆ ಮೊದಲಾದ ವಿವಿಧ ರೀತಿಯ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಹಾಗೆಯೇ ತಮ್ಮೆಲ್ಲ ನ್ಯೂನತೆಗಳ ಹೊರತಾಗಿಯೂ ಜಗತ್ತೇ ನಿಬ್ಬೆರಗಾಗುವ ರೀತಿಯಲ್ಲಿ ಸಾಧನೆಗೈದ ವ್ಯಕ್ತಿಗಳ ಉದಾಹರಣೆಗಳು ನಮ್ಮ ನಡುವೆ ಕಾಣಸಿಗುತ್ತವೆ. ಆದರೂ ಸಮಾಜದ ವಿವಿಧ ಸೌಕರ್ಯಗಳ ಪರಿಮಿತಿಯಿಂದ ದೂರವಿದ್ದು ಶಿಕ್ಷಣ, ಉದ್ಯೋಗ ಆರೋಗ್ಯ, ಸಾಮಾಜಿಕ, ಧಾರ್ಮಿಕ ಸೌಲಭ್ಯಗಳಿಂದ ಬಹುತೇಕ ವಿಶೇಷ ಚೇತನವುಳ್ಳ ವ್ಯಕ್ತಿಗಳು ವಂಚಿತರಾಗಿದ್ದಾರೆ. ಹಾಗೂ ದಯನೀಯ ಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದಾರೆ. ಸಮಾಜದ ಆಸ್ತಿಯಾಗಬಲ್ಲ ಅಂತಹ ವಿಶೇಷ ಚೇತನರನ್ನು ಸಾಮಾಜಿಕ, ಆರ್ಥಿಕ ಹಾಗೂ ಮಾನಸಿಕ ಸಂಕಷ್ಟಗಳಿಂದ ಮುಕ್ತಗೊಳಿಸುವ ಪ್ರಯತ್ನ ಹೆಚ್ಚಿನ ವೇಗವನ್ನು ಪಡೆದುಕೊಳ್ಳಬೇಕಿದೆ.

### ಚಟುವಟಿಕೆಯ ಪರಿಚಯ

ಬೌದ್ಧಿಕ ಸವಾಲುಗಳನ್ನು ಎದುರಿಸುತ್ತಿರುವವರ ಕ್ಷೇಮಾಭಿವೃದ್ಧಿಗಾಗಿ ರಾಜ್ಯದಾದ್ಯಂತ ಅನೇಕ ಸಂಸ್ಥೆಗಳು–ಪ್ರಕಲ್ಪಗಳು ಕಾರ್ಯನಿರ್ವಹಿಸುತ್ತಿವೆ. ವಿಕಲತೆ ಹೊಂದಿದವರುವವರು ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆತು ಜೀವನ ನಡೆಸುವಲ್ಲಿ ಸಮರ್ಥರಾಗುವಂತೆ ಮಾಡುವುದರ ಜೊತೆ–ಗೆ ಅವರ ಕುಟುಂಬಗಳಿಗೆ ಸಹಾಯವನ್ನೂ ನೀಡಲಾಗುತ್ತದೆ. ಈ ಕಾರ್ಯವು ಅನೇಕ ವಿಷಯಗಳನ್ನು ಒಳಗೊಂಡಿದೆ:

- ಸಮುದಾಯ ಆಧಾರಿತ ಪುನರ್ವಸತಿ; ಮಾನವ ಸಂಪನ್ಮೂಲ ಇಲಾಖೆ, ಸೇವಾ ಕಾರ್ಯ ಜಂಟಿ ಪರಿಶೀಲನಾ ನಿಯೋಗ ಮುಂತಾದ ಸರ್ಕಾರಿ ವ್ಯವಸ್ಥೆಯ ಜೊತೆಗೆ ಕಾರ್ಯನಿರ್ವಹಿಸುವುದು. ವಿಶೇಷ ಚೇತನರ ಶಿಕ್ಷಣ ಕುಶಲತಾ ತರಬೇತಿ ಮೊದಲಾದ ವಿಷಯಗಳ ನೀತಿಗೆ ಸಂಬಂಧಿಸಿದಂತೆ ಕರಡನ್ನು ತಯಾರು ಮಾಡುವುದು, ನೀತಿ ನಿರೂಪಣೆಗೆ ಮಾಹಿತಿಯನ್ನೊದಗಿಸುವುದು. ಸರ್ಕಾರೇತರ ಸಂಸ್ಥೆಗಳನ್ನು ಈ ಕಾರ್ಯದಲ್ಲಿ ಜೋಡಿಸುವುದು.
- ವಿಕಲತೆ ಉಳ್ಳವರ ಶೈಕ್ಷಣಿಕ ಅಗತ್ಯಗಳನ್ನು ಅರ್ಥ ಮಾಡಿಕೊಂಡು ತರಬೇತಿ ನೀಡಬಲ್ಲ ಶಿಕ್ಷಕರು ಹಾಗೂ ಕಾರ್ಯಕರ್ತರನ್ನು ತಯಾರು ಮಾಡುವುದು. ಆಟಗಳ ಮೂಲಕ ಬೌದ್ಧಿಕ ಚಿಕಿತ್ಸೆ ನೀಡುವುದು. ಶಿಕ್ಷಣಕ್ಕೆ ಅಗತ್ಯವಾದ ತಂತ್ರಜ್ಞಾನ, ಸಲಕರಣೆಗಳನ್ನು ವಿಕಸನಗೊಳಿಸುವುದು.
- ವಿಶೇಷ ಚೇತನವುಳ್ಳವರಿಗೆ ವೃತ್ತಿಪರ ತರಬೇತಿಯನ್ನು ನೀಡುವುದು.
- ಸೆರೆಬ್ರಲ್ ಪಾಲ್ಸಿ, ಬುದ್ಧಿ ಮಾಂದ್ಯತೆ, ಶ್ರವಣ ಮಾಂದ್ಯತೆ, ಆಟಿಸಮ್, ಡಿಸ್‌ಲೆಕ್ಸಿಯಾ ಮುಂತಾದ ನ್ಯೂನತೆಗಳುಳ್ಳ ಮಕ್ಕಳಿಗಾಗಿ ವಿಶೇಷ ಶಾಲೆ, ತರಬೇತಿ ಕೇಂದ್ರಗಳನ್ನು ನಡೆಸುವುದು. ಉದಾಹರಣೆಗೆ ಅರುಣ ಚೇತನ ಸಂಸ್ಥೆಯು ಬೆಂಗಳೂರಿನ ಕೆಂಪಾಪುರದಲ್ಲಿನ ಚೈತನ್ಯ ಶಾಲೆ, ಪೀಣ್ಯದ ಪ್ರಣತಿ ಶಾಲೆ, ತಿಂಡ್ಲುವಿನ ಬೆಳಕು ಶಾಲೆ ಇನ್ನೂ ಕೆಲವು ಪ್ರದೇಶಗಳಲ್ಲಿ ಇಂತಹ ಶಾಲೆಗಳನ್ನು ನಡೆಸುತ್ತಿದೆ. ಗದಗ, ಕೈವಾರ, ಕೊಪ್ಪ, ಕಲಬುರಗಿ ಮುಂತಾದ ಪ್ರದೇಶಗಳಲ್ಲೂ ವಿಶೇಷ ಶಾಲೆಗಳನ್ನು ನಡೆಸಲಾಗುತ್ತಿದೆ.
- ವಿಕಲತೆಯ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಶಾರೀರಿಕ–ಬೌದ್ಧಿಕ ನ್ಯೂನತೆ ಉಳ್ಳವರೂ ಗೌರವಪೂರ್ಣವಾಗಿ, ಸಮಾಜದ ಹಿತದಲ್ಲಿ ಬದುಕಬಲ್ಲರು ಎನ್ನುವ ಸಂದೇಶವನ್ನು ನೀಡುವುದು. ಉದಾಹರಣೆಗೆ ಸೇವಾ ಇನ್ ಆ್ಯಕ್ಷನ್ ಸಂಸ್ಥೆ ನಡೆಸುವ 'ಬಢತೇ ಕದಮ್' ಕಾರ್ಯಕ್ರಮ.
- ಪೋಷಕರ ಸ್ವ–ಸಹಾಯ ಗುಂಪುಗಳು, ಸ್ಥಳೀಯ ಸಮಿತಿಗಳನ್ನು ಉತ್ತೇಜಿಸುವುದು.

### ಫಲಶೃತಿ

- ಈ ಕಾರ್ಯದಲ್ಲಿ ಅನೇಕ ಸೇವಾಸಂಸ್ಥೆಗಳನ್ನು ಜೋಡಿಸಲಾಗಿದ್ದು ರಾಜ್ಯದ ವಿವಿಧೆಡೆಗಳಲ್ಲಿ ಶಾಲೆಗಳು, ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ.
- ಸುಮಾರು 500 ಸರ್ಕಾರಿ ಶಾಲಾ ಶಿಕ್ಷಕರಿಗೆ ಹಾಗೂ ಸರ್ಕಾರೇತರ ಸಂಸ್ಥೆಗಳ ಸಾವಿರಕ್ಕೂ ಹೆಚ್ಚು ಶಿಕ್ಷಕರಿಗೆ ತರಬೇತಿ ನೀಡಲಾಗಿದೆ.
- ವಿಶೇಷ ಚೇತನರ ಮಾನವ ಹಕ್ಕುಗಳ ವಿಷಯದಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಕೈಗೊಳ್ಳಲಾಗಿದೆ.
- ಸಮುದಾಯ ಆಧಾರಿತ ಪುನರ್ವಸತಿ, ಸರ್ವರಿಗೂ ಶಿಕ್ಷಣ ಮುಂತಾದ ವಿಷಯಗಳ ಕಾರ್ಯ ಅನುಷ್ಠಾನದಲ್ಲಿ ಕೈಜೋಡಿಸಲಾಗಿದೆ.

### ನಾವೇನು ಮಾಡಬಹುದು?

- ವಿಶೇಷ ಚೇತನರಿಗೆ ಶಿಕ್ಷಣ, ವೃತ್ತಿಪರ ತರಬೇತಿ ನೀಡುವ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು. ಅವರು ತಯಾರಿಸಿದ ವಸ್ತುಗಳ ಮಾರಾಟದಲ್ಲಿ ಸಹಾಯ ಮಾಡುವುದು.
- ಬಿಡುವಿನ ಸಮಯದಲ್ಲಿ ವಿಶೇಷ ಚೇತನವುಳ್ಳ ಮಕ್ಕಳಿಗೆ ಆಟಗಳನ್ನು ಹೇಳಿಕೊಡುವುದು, ಕಲೆ, ಕರಕುಶಲ ಕೆಲಸ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸುವುದು, ಯೋಗ ತರಬೇತಿ ನೀಡುವುದು ಇತ್ಯಾದಿಗಳಿಂದ ಅಂತಹ ಮಕ್ಕಳಲ್ಲಿರುವ ಪ್ರತಿಭೆಯನ್ನು ಪ್ರೋತ್ಸಾಹಿಸುವುದು
- ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ತಂತ್ರಜ್ಞಾನ ಅಭಿವೃದ್ಧಿ, ಸಲಕರಣೆಗಳನ್ನು ಜೋಡಿಸುವುದು
- ವಿವಿಧ ಸೇವಾಸಂಸ್ಥೆಗಳನ್ನು ಈ ಕಾರ್ಯದಲ್ಲಿ ಜೋಡಿಸುವುದು; ವಿವಿಧ ಸಂಘಟನೆಗಳು, ಸರ್ಕಾರಿ ವ್ಯವಸ್ಥೆಯೊಡನೆ ಸಮನ್ವಯ ಸ್ಥಾಪಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು.
- ಆರ್ಥಿಕ ಸಹಾಯದ ಅಗತ್ಯವುಳ್ಳ ಮಕ್ಕಳ ಶಿಕ್ಷಣವನ್ನು ಪ್ರಾಯೋಜಿಸುವುದು
- ಸಂಪನ್ಮೂಲ ಕ್ರೋಢೀಕರಣ
- ಸಾಮಾಜಿಕ ಜಾಲತಾಣಗಳೂ ಸೇರಿದಂತೆ ವಿದ್ಯುನ್ಮಾನ, ದೃಶ್ಯ, ಬರವಣಿಗೆ ಮಾಧ್ಯಮಗಳ ಮೂಲಕ ವಿಶೇಷ ಚೇತನ ವ್ಯಕ್ತಿಗಳ ಮಾನವ ಹಕ್ಕು, ಸಮಾಜದ ಕರ್ತವ್ಯಗಳ ಕುರಿತು ಜಾಗೃತಿ ಮೂಡಿಸುವುದು.
- ವಿಶೇಷ ಚೇತನವುಳ್ಳ ವ್ಯಕ್ತಿಗಳಿಗೆ ಸಮಾಜದ ಸಹಾನುಭೂತಿಗಿಂತ ಹೆಚ್ಚಾಗಿ ಪ್ರೋತ್ಸಾಹ, ಅವಕಾಶಗಳು ದೊರೆಯುವಂತಹ ವಾತಾವರಣವನ್ನು ನಮ್ಮ ಸುತ್ತಮುತ್ತಲಿನಲ್ಲಿ ನಿರ್ಮಿಸಲು ಪ್ರಯತ್ನಿಸುವುದು.


**ಸಂಪರ್ಕ:**

**ಸೇವಾ ಇನ್ ಆ್ಯಕ್ಷನ್**
#36, ಎಸ್ ಟಿ ಬೆಡ್ ಲೇಔಟ್, 1ನೇ ಮುಖ್ಯರಸ್ತೆ
ಕೋರಮಂಗಲ, ಬೆಂಗಳೂರು – 560 034
ವೆಬ್‌ಸೈಟ್: http://sevainaction.org
☎: 080–25520347 ಇ–ಮೇಲ್: sevainaction@gmail.com

**ಅರುಣ ಚೇತನ**
#56, 11ನೇ ಮುಖ್ಯರಸ್ತೆ, ಮಲ್ಲೇಶ್ವರಂ ಬೆಂಗಳೂರು–560 003
ವೆಬ್‌ಸೈಟ್: arunachetana.org
☎: 080–2331 2908 ಇ–ಮೇಲ್: info@arunachetana.org

**ಮನೋನಂದನ**
#1, 3ನೇ ಮುಖ್ಯರಸ್ತೆ, ಟಾಟಾ ಸಿಲ್ಕ್ ಫಾರ್ಮ್
ಕೆ.ಆರ್. ರೋಡ್ ಬಸವನಗುಡಿ, ಬೆಂಗಳೂರು – 560004
ದೂರವಾಣಿ: 9886058829, 080–26766938




## ನೆಲದ ಮಾತು

### ಕುಂಬಳ ಬೆಳೆದು ಧನ್ಯರಾದರು

ಅಡಿಕೆ ಸಿಪ್ಪೆಯನ್ನು ರಸ್ತೆ ಬದಿ ಸುಟ್ಟು ಭಸ್ಮ ಮಾಡುವವರೇ ಹೆಚ್ಚು. ಆದರೆ ಗುಬ್ಬಿ ತಾಲ್ಲೂಕು ಕಡಬ ಹೋಬಳಿಯ ಮೆಳೆಕಲ್ಲಹಳ್ಳಿ ಗ್ರಾಮದ ಪಾರ್ವತಮ್ಮ, ಮಲ್ಲೇಶಯ್ಯ ದಂಪತಿ ಮಾತ್ರ ಅಡಿಕೆ ಸಿಪ್ಪೆಯನ್ನು ಸದುಪಯೋಗ ಪಡಿಸಿಕೊಂಡಿದ್ದಾರೆ. ಕುಂಬಳ ಬೆಳೆದು, ಹಂಚಿ ವಿಶಿಷ್ಟ ಸಾಧನೆ ಮಾಡಿದ್ದಾರೆ. 'ತೋಟದ ಅಡಿಕೆ ಸಿಪ್ಪೆ ಮೇಲೆ ಒಂದು ಟ್ರ್ಯಾಕ್ಟರ್ ಲೋಡ್ ಗೋಡು ಮಣ್ಣು ಸುರಿದು, ಅದರ ಮೇಲೆ ಬಳ್ಳಿ ಹರಡಿದೆ. ಮಣ್ಣಿನ ಮೇಲೆ ಬಿತ್ತಿದ ಒಂದು ಗುಣಿ ಬೀಜ ನೂರಾರು ಕಾಯಿ ಬಿಡುತ್ತಿದೆ. ತೋಟದ ಪಂಪ್ ಹೌಸಿನ ಮೇಲೆ ಹಬ್ಬಿದ ಬಳ್ಳಿಯಲ್ಲಿ ಕಾಯಿಗಳು ಇಳಿಬಿದ್ದಿವೆ. ಇಳಿಬಿದ್ದ ಕುಂಬಳಕಾಯಿ ನೋಡಿದವರಿಗೆ ಇದು ಅಚ್ಚರಿಯಂತೆ ಕಾಣುತ್ತಿದೆ' ಎಂದು ತಮ್ಮ ತೋಟದ ಕುಂಬಳದ ಬಗ್ಗೆ ಅಕ್ಕರೆಯಿಂದ ವಿವರಿಸುತ್ತಾರೆ. ಗಿಡದ ನಿರ್ವಹಣೆಗೆ ನಾವು ನಯಾಪೈಸೆ ಖರ್ಚು ಮಾಡಿಲ್ಲ. ಬಳ್ಳಿಯಲ್ಲಿ ಜೋತುಬಿದ್ದ ಕುಂಬಳಕಾಯಿಯಿಗಳನ್ನು ತಾವೂ ತಿಂದು, ಕೇಳಿದವರಿಗೂ ಕೊಡುತ್ತಿದ್ದಾರೆ. 'ಹಣಕ್ಕೆ ಮಾರುತ್ತೀರಾ?' ಎಂದು ಕೇಳಿದರೆ, 'ಮನೆ ಬಾಗಿಲಿಗೆ ಬಂದು ಕೇಳಿದವರಿಗೆ ಒಂದೊಂದು ಕೊಡ್ತೀವಿ. ದುಡ್ಡಿಗೆ ಯಾಕೆ ಮಾರೋಣ?' ಎಂದು ಪಾರ್ವತಮ್ಮ ನಗುತ್ತಾರೆ. ನಾಟಿ ತಳಿಯ ಕುಂಬಳವನ್ನು ಮಾಗಿ ಚಳಿಯಲ್ಲಿ ಹೆಚ್ಚು ನೋಡಬಹುದು. ಬೇಲಿ, ಹಿತ್ತಲು, ತಿಪ್ಪೆ ನಂಟು ಬೆಳೆಸಿಕೊಂಡ ಎಲ್ಲರೂ ಕುಂಬಳದ ಸವಿ ಉಂಡಿದ್ದಾರೆ. ಕುಂಬಳ ಕಾಯಿಯಿಂದ ಸಿಹಿ ಮತ್ತು ಖಾರದ ಪಲ್ಯ ಮಾಡಿ ರಾಗಿ ರೊಟ್ಟಿಗೆ ನಂ–ಚಿಕೊಂಡರೆ ಸ್ವರ್ಗ ಸುಖ. ಕಾಯಿ ಬೆಲ್ಲವನ್ನು ಹದವಾಗಿ ಬೆರೆಸಿ ಮಾಡಿದ ಕುಂಬಳ ಪಾಯಸದ ರುಚಿಯನ್ನು ಬಲ್ಲವರೇ ಬಲ್ಲರು.

ಕೃಪೆ : ಪ್ರಜಾವಾಣಿ




- ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲು ಜಾರಿಗೊಳಿಸಿರುವ ಸಿಗರೇಟು ಮತ್ತು ಇತರ ತಂಬಾಕು ಉತ್ಪನ್ನಗಳ ನಿಯಂತ್ರಣ ಕಾಯ್ದೆ (ಕೋಟ್ಪಾ) ಅನುಷ್ಠಾನದಲ್ಲಿ ರಾಜ್ಯದ ಉತ್ತರ ಪೊಲೀಸ್ ವಲಯ ದೇಶದಲ್ಲಿಯೇ ಮುಂಚೂಣಿಯಲ್ಲಿದೆ. ಉತ್ತರ ವಲಯ ವ್ಯಾಪ್ತಿಯ ವಿಜಯಪುರ, ಬಾಗಲಕೋಟೆ, ಧಾರವಾಡ, ಬೆಳಗಾವಿ, ಗದಗ ಮತ್ತು ಹಾವೇರಿ ಜಿಲ್ಲೆಯಲ್ಲಿ ಕಾಯ್ದೆಯು ಕಟ್ಟುನಿಟ್ಟಾಗಿ ಅನುಷ್ಠಾನಗೊಂಡಿದೆ. ಪರಿಣಾಮ ದೇಶದಲ್ಲಿಯೇ ಮೆಚ್ಚುಗೆಗೆ ಪಾತ್ರವಾಗಿದೆ. ಇದರಲ್ಲಿ ಗದಗ ಜಿಲ್ಲೆಯು ದೇಶಕ್ಕೆ ಮಾದರಿ ಜಿಲ್ಲೆಯಾಗಿದೆ. ಸಮರ್ಪಕವಾಗಿ ಕಾಯ್ದೆಯನ್ನು ಅನುಷ್ಠಾನಗೊಳಿಸಿರುವ ಗದಗ ಜಿಲ್ಲೆ ಕೇಂದ್ರ ಗೃಹ ಇಲಾಖೆಯು ವಿಶೇಷವಾಗಿ ಅಭಿನಂದಿಸಿದೆ.
- ರಾಜ್ಯದಲ್ಲಿ ಪ್ಲಾಸ್ಟಿಕ್ ರಾಷ್ಟ್ರಧ್ವಜ ಬಳಕೆ ನಿಷೇಧಿಸಿ ಆಡಳಿತ ಮತ್ತು ಸಿಬ್ಬಂದಿ ಸುಧಾರಣಾ ಇಲಾಖೆ ಆದೇಶಿಸಿದೆ. ಭಾರತದ ಧ್ವಜ ಸಂಹಿತೆ 2002ರಲ್ಲಿನ ನಿಯಮಗಳನ್ವಯ ಉಣ್ಣೆ, ಹತ್ತಿ ಮತ್ತು ರೇಷ್ಮೆ ಬಟ್ಟೆಗಳಿಂದ ತಯಾರಿಸಲಾದ ರಾಷ್ಟ್ರಧ್ವಜವನ್ನು ಮಾತ್ರ ಬಳಸಬೇಕು ಎಂದು ಆದೇಶದಲ್ಲಿ ತಿಳಿಸಿದೆ.



- ದೇಶೀನಿರ್ಮಿತ ಅತ್ಯಾಧುನಿಕ ಲಘು ಯುದ್ಧ ವಿಮಾನ 'ತೇಜಸ್' ಜನವರಿ 17ರಂದು ವಿದ್ಯುಕ್ತವಾಗಿ ವಾಯುಸೇನೆಗೆ ಸೇರ್ಪಡೆಗೊಂಡಿದೆ. ವಾಯುಸೇನೆಯ 32 ವರ್ಷಗಳ ಸತತ ಪರಿಶ್ರಮಕ್ಕೆ ಮೊದಲ ಯಶಸ್ಸು ದೊರೆತಿದ್ದು, ದೇಶೀನಿರ್ಮಿತ ಅತ್ಯಾಧುನಿಕ ಲಘು ಯುದ್ಧ ವಿಮಾನ 'ತೇಜಸ್' ಭಾರತೀಯ ಸೇನೆಯನ್ನು ಸೇರಿ ಕೊಂಡಿದೆ. ತೇಜಸ್ ಅನ್ನು ಎಚ್‌ಎಎಲ್ ಸಂಸ್ಥೆ ಮತ್ತು ರಕ್ಷಣಾ ಉತ್ಪಾದನಾ ಮತ್ತು ಸಂಶೋಧನಾ ಸಂಸ್ಥೆಗಳಾದ ಎಚ್‌ಎಲ್, ಡಿಆರ್‌ಡಿಓ ಮತ್ತು ಆರ್‌ಡಿಇ ಸಂಸ್ಥೆಗಳು ಜಂಟಿಯಾಗಿ ನಿರ್ಮಿಸಿದೆ. 2001ರ ಜನವರಿ 4ರಂದು ಪ್ರಥಮ ಬಾರಿಗೆ ತೇಜಸ್ ಯುದ್ಧ ವಿಮಾನದ ಪರಿಕ್ಷಾರ್ಥ ಹಾರಾಟವನ್ನು ನಡೆಸಲಾಗಿತ್ತು. ಬಳಿಕ ಈವರೆಗೆ ಸುಮಾರು 1800 ಗಂಟೆಗಳ ಕಾಲ ಯಶಸ್ವಿ ಪರಿಕ್ಷಾರ್ಥ ಹಾರಾಟ ನಡೆಸಿದ್ದು, ಸುಮಾರು 1500ಕ್ಕೂ ಹೆಚ್ಚು ಹಂತಗಳಲ್ಲಿ ಪರಿಕ್ಷೆಗೊಳಪಟ್ಟಿದೆ. ರಾಡಾರ್ ವ್ಯವಸ್ಥೆಯನ್ನು ಅಳವಡಿಸಲಾಗಿರುವ ಈ ಅತ್ಯಾಧುನಿಕ ಲಘು ಯುದ್ಧವಿಮಾನಕ್ಕೆ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು 'ತೇಜಸ್' ಎಂದು ನಾಮಕರಣಗೊಳಿಸಿದರು. ಪ್ರಸ್ತುತ ಭಾರತೀಯ ವಾಯುಸೇನೆಗೆ 20 ತೇಜಸ್ ಯುದ್ಧ ವಿಮಾನಗಳನ್ನು ಸೇರ್ಪಡೆಗೊಳಿಸಲಾಗಿದೆ. ಒಂದು ತೇಜಸ್ ಲಘು ಯುದ್ಧ ವಿಮಾನ ನಿರ್ಮಾಣಕ್ಕೆ ಸುಮಾರು 200 ಕೋಟಿ ಖರ್ಚಾಗಲಿದ್ದು, ಶೇ.75ರಷ್ಟು ಬಿಡಿಭಾಗಗಳನ್ನು ಭಾರತದಲ್ಲಿಯೇ ತಯಾರಿಸಲಾಗುತ್ತಿದ್ದು, ಉಳಿದ ಶೇ.25ರಷ್ಟು ಬಿಡಿಭಾಗಗಳನ್ನು ಮಾತ್ರ ವಿದೇಶಗಳಿಂದ ತರಿಸಿಕೊಳ್ಳಲಾಗುತ್ತಿದೆ ಎಂದು ಸೇನಾ ಮೂಲಗಳು ತಿಳಿಸಿವೆ.



ಸಂಪಾದಕೀಯ ಸಹಕಾರ ಶಿವಪ್ರಸಾದ್ ಸುರ್ಯ, ಜಿ.ಆರ್. ಸಂತೋಷ್, ಶ್ರೀವತ್ಸ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ರಾಜೇಶ್ ಪದ್ಮಾರ್, ಮೊಳಹಳ್ಳಿ ಅನಿಲ್‌ಕುಮಾರ್

(1ನೇ ಪುಟದಿಂದ)


# ಮತ್ತೆ ನೆನಪಾಗುವ ಅಮರ ಬಲಿದಾನಿಗಳು

## ಖುದಿರಾಮ್ ಬೋಸ್ (1889–1908)



ಬಾಲ್ಯದಲ್ಲಿಯೇ ತಂದೆತಾಯಿಯನ್ನು ಕಳೆದುಕೊಂಡು ಅಕ್ಕ–ಭಾವರೋದಿಗೆ ಬೆಳೆದ ಖುದಿರಾಮ್ ಹುಟ್ಟುದೇಶಭಕ್ತ. ಬಂಕಿಮಚಂದ್ರರು ಬರೆದ 'ಆನಂದ ಮಠ'ದ 'ವಂದೇ ಮಾತರಂ' ಗೀತೆಯಂತೂ ಇವರ ನರನಾಡಿಗಳಲ್ಲಿ ದೇಶಭಕ್ತಿ ಉಕ್ಕಿ ಹರಿಯುವಂತೆ ಮಾಡಿತ್ತು. ಹೀಗಾಗಿ ಸುಮಾರು 15ರ ಹರೆಯದಲ್ಲಿಯೇ ದೇಶಭಕ್ತಿಯನ್ನು ಮೈಗೂಡಿಸಿಕೊಂಡ ಬೋಸ್ ಕ್ರಾಂತಿಕಾರಿ ಸಂಘಟನೆಗಳ ಜೊತೆಗೆ ನಿಕಟ ಸಂಬಂಧವನ್ನಿಟ್ಟುಕೊಂಡುದಲ್ಲದೇ ಅದರ ಪ್ರಚಾರಕ್ಕಾಗಿ ಕರಪತ್ರಗಳನ್ನು ಹಂಚುತ್ತಿದ್ದಾಗ ಸಿಕ್ಕಿಬಿದ್ದು ಬಿಡುಗಡೆಗೊಂಡರು. ಆಗ ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚು ಕಾಳ್ಗಿಚ್ಚಾಗಿ ಭುಗಿಲೆದ್ದಿತು. ಇದಕ್ಕೆ ಹಲವಾರು ಪತ್ರಿಕೆಗಳು ಕುಮ್ಮಕ್ಕು ನೀಡುತ್ತಿದ್ದವು. ಹೀಗಾಗಿ ಬ್ರಿಟಿಷರ ವಿರುದ್ಧವಾಗಿ ಬರೆದ ಪತ್ರಿಕೆಗಳ ಮೇಲೆ ಮೊಕದ್ದಮೆ ಹೂಡಲಾಗುತ್ತಿತ್ತು. ಅರವಿಂದ ಘೋಷರ ಸಂಪಾದಕತ್ವದಲ್ಲಿ ಹೊರಬರುತ್ತಿದ್ದ 'ವಂದೇ ಮಾತರಂ' ಪತ್ರಿಕೆಯ ಮೇಲೆ ರಾಜದ್ರೋಹದ ಆಪಾದನೆ ಹೊರಿಸಿತು. ಈ ಮೊಕದ್ದಮೆಯ ವಿಚಾರಣೆಯನ್ನು ವಿರೋಧಿಸಿ ಪ್ರತಿಭಟನೆ ಮಾಡುತ್ತಿದ್ದ ನಿರಾಯುಧ ಗುಂಪಿನ ಮೇಲೆ ಬ್ರಿಟಿಷರು ಅನಾವಶ್ಯಕವಾಗಿ ಲಾಠಿ ಪ್ರಹಾರ ಮಾಡಿದರು. ಇದರಿಂದ ಕೆರಳಿದ ಹದಿನೈದು ವರ್ಷದ ಸುಶೀಲ್ ಸೇನ್ ಬ್ರಿಟಿಷ್ ಅಧಿಕಾರಿಗೆ ತಿರುಗಿಸಿ ಹೊಡೆದ. ರೊಚ್ಚಿಗೆದ್ದ ಬ್ರಿಟಿಷ್ ಅಧಿಕಾರಿ ಕಿಂಗ್ಸ್ ಫೋರ್ಡನು ಸುಶೀಲ್‌ನನ್ನು ಮ್ಯಾಜಿಸ್ಟ್ರೇಟ್ ಮುಂದೆ ನಿಲ್ಲಿಸಿ ವಯಸ್ಸನ್ನು ಲೆಕ್ಕಿಸದೆ 15 ಛಡಿ ಏಟಿನ ಶಿಕ್ಷೆ ವಿಧಿಸಿ ವಿಕೃತಿ ಮೆರೆದನು. ಅಪ್ರಾಪ್ತ ಬಾಲಕನ ಮೇಲೆ ಲಾಠಿ ಬೀಸಿದ್ದಲ್ಲದೆ, ಉಗ್ರಶಿಕ್ಷೆಗಳನ್ನು ನೀಡುತ್ತಿದ್ದ ಬ್ರಿಟಿಷರ ದಬ್ಬಾಳಿಕೆಯನ್ನು ಸಹಿಸದ ಕ್ರಾಂತಿಕಾರಿಗಳು ಕಿಂಗ್ಸ್ ಫೋರ್ಡನನ್ನು ಮುಗಿಸಲು ತೀರ್ಮಾನಿಸಿದರು. ಇದರ ಸುಳಿವು ಹತ್ತಿದ ಬ್ರಿಟಿಷ್ ಸರ್ಕಾರ ಕಿಂಗ್ಸ್ ಫೋರ್ಡನನ್ನು ಮುಜಾಫರಪುರಕ್ಕೆ ವರ್ಗ ಮಾಡಿತು. ಕಿಂಗ್ಸ್ ಫೋರ್ಡನನ್ನು ಕೊಲ್ಲಲೇಬೇಕು ಎನ್ನುವ ದೃಢ ನಿರ್ಧಾರ ಮಾಡಿದ್ದ ಕ್ರಾಂತಿಕಾರಿಗಳು, ಈ ಕಾರ್ಯವನ್ನು 'ಯುಗಾಂತರ' ಗುಂಪಿನ ನಾಯಕರಾದ ಖುದಿರಾಮ್ ಬೋಸ್, ಸತ್ಯೇಂದ್ರನಾಥ ಬೋಸ್ ಮತ್ತು ಪ್ರಫುಲ್ಲ ಚಾಕಿಗೆ ವಹಿಸಿದರು. ಕಿಂಗ್ಸ್ ಫೋರ್ಡ್‌ನು ಸಂಜೆ ಕ್ಲಬ್ಬಿನಿಂದ ಮನೆಗೆ ಬರುವ ದಾರಿಯಲ್ಲಿ ಕಾರಿನ ಮೇಲೆ ಬಾಂಬ್ ಹಾಕಲು ನಿರ್ಧರಿಸಲಾಯಿತು. ಎಂದಿನಂತೆ ಕಾರು ಹೊರಟು ಬಂದಿತು. ಅದರೊಳಗೆ ಯಾರಿದ್ದಾರೆಂದು ಗಮನಿಸದೆ ಬೋಸ್ ಮತ್ತು ಪ್ರಫುಲ್ಲ ಬಾಂಬ್ ಎಸೆದರು. ಆದರೆ ಅದೃಷ್ಟವಶಾತ್ ಕಿಂಗ್ಸ್ ಫೋರ್ಡ್ ಬದಲಾಗಿ ಅದರಲ್ಲಿದ್ದ ಇಬ್ಬರು ಮಹಿಳೆಯರು ಅಸುನೀಗಿದರು. ಇತ್ತ ಕಿಂಗ್ಸ್ ಫೋರ್ಡನನ್ನು ಕೊಂದೆವು ಎಂದುಕೊಂಡ ಈ ಹುಡುಗರು ಬೇರೆಬೇರೆ ದಿಕ್ಕಿಗೆ ಓಡಿದರು. ಮುಜಾಫುರದಿಂದ ಸುಮಾರು 25 ಮೈಲುಗಳಾಚೆ ಯುವಕ ಖುದಿರಾಮ್ ಬೋಸರನ್ನು ಸೆರೆಹಿಡಿಯಲಾಯಿತು. ತಪ್ಪಿಸಿಕೊಳ್ಳಲು ಆತ ಮಾಡಿದ ಎಲ್ಲ ಸಾಹಸಗಳು ವ್ಯರ್ಥವಾಗಿ ಬಂಧನವಾಯಿತು. ಅವರ ಮೇಲೆ ವಿಚಾರಣೆ ಎಂಬ ನಾಟಕ ನಡೆಸಿ ಮರಣದಂಡನೆಯನ್ನು ವಿಧಿಸಿತು. 1908ರ ಆಗಸ್ಟ್ 19ರಂದು ಗಲ್ಲಿಗೇರಿಸಲಾಯಿತು. 19 ವರ್ಷ ವಯಸ್ಸಿನ ಖುದಿರಾಮ್ ಗಲ್ಲಿಗೇರುವಾಗ ಕೈಯಲ್ಲಿ ಭಗವದ್ಗೀತೆ ಹಿಡಿದುಕೊಂಡಿದ್ದ. ಕ್ರಾಂತಿಕಾರಿಗಳು ಎಸೆದ ಬಾಂಬು ಕಿಂಗ್ಸ್ ಫೋರ್ಡನನ್ನು ಕೊಲ್ಲಲಿಲ್ಲವಾದರೂ, ಇಡೀ ಬ್ರಿಟಿಷ್ ಸಾಮ್ರಾಜ್ಯಕ್ಕೇ ಮೊದಲ ನಡುಕ ಹುಟ್ಟಿಸಿಬಿಟ್ಟಿತ್ತು. ಈ ಹುಡುಗರು ಎಸೆದ ಬಾಂಬು ಕೇವಲ ಕಿಂಗ್ಸ್ ಫೋರ್ಡನ ವಾಹನ ಚೂರುಚೂರು ಮಾಡಿದ್ದಲ್ಲದೆ ಬ್ರಿಟಿಷ್ ಸಾಮ್ರಾಜ್ಯದ ಅಹಂಕಾರ ಮತ್ತು ದರ್ಪಗಳನ್ನೇ ನುಚ್ಚುನೂರು ಮಾಡಿತ್ತು.

## ಕಿತ್ತೂರು ರಾಣಿ ಚೆನ್ನಮ್ಮ



ತನ್ನ ರಾಜ್ಯದ ಹಿತಕ್ಕಾಗಿ, ಸಂಸ್ಥಾನದ ಸ್ವಾತಂತ್ರ್ಯ ರಕ್ಷಣೆಗಾಗಿ, ಬ್ರಿಟಿಷರೊಡನೆ ಹೋರಾಡಿದ ಪ್ರಪ್ರಥಮ ಭಾರತೀಯ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ. ಸುದೀರ್ಘ ಇತಿಹಾಸವಿರುವ ಕಿತ್ತೂರು ಸಂಸ್ಥಾನದ ಪ್ರಮುಖ ಅರಸರಲ್ಲೊಬ್ಬನಾದ ಮಲ್ಲಸರ್ಜ ದೇಸಾಯಿಯ ಇಬ್ಬರು ರಾಣಿಯಂದಿರಲ್ಲಿ ಕಿರಿಯವಳು ಚೆನ್ನಮ್ಮ. ಆಡಳಿತದ ಅನುಭವವೂ, ಯುದ್ಧಕಲೆಗಳಲ್ಲಿ ಪ್ರಾವಿಣ್ಯತೆಯನ್ನೂ ಪಡೆದಿದ್ದ ಚೆನ್ನಮ್ಮನಿಗೆ ಮಕ್ಕಳಿರಲಿಲ್ಲ. ರೋಗಿಷ್ಟನಾಗಿದ್ದ ಮಲ್ಲಸರ್ಜ ತೀರಿದ ಬಳಿಕ ಸಹಜವಾಗಿ ಹಿರಿಯ ರಾಣಿ ರುದ್ರವ್ವೆಯ ಹಿರಿಯ ಮಗ ಶಿವಲಿಂಗ ರುದ್ರಸರ್ಜನು ಪಟ್ಟಕ್ಕೆ ಬಂದ. ಆತನಿಗೂ ಮಕ್ಕಳಾಗದಿದ್ದಾಗ ರಾಜ್ಯದ ಹಿತದೃಷ್ಟಿಯಿಂದ ಮಾಸ್ತರಮರಡಿ ಬಾಳಪ್ಪಗೌಡರ ಮಗ ಶಿವಲಿಂಗಪ್ಪ ಎಂಬ ಬಾಲಕನನ್ನು ದತ್ತಕ ಮಾಡಿಕೊಳ್ಳಲಾಯಿತು. ಆದರೆ ಶಿವಲಿಂಗ ಸರ್ಜ ತೀರಿಕೊಂಡ (1824) ನಂತರ ದತ್ತು ಮಗನ ಹೆಸರಿನಲ್ಲಿ ರಾಣಿ ಚೆನ್ನಮ್ಮ ರಾಜ್ಯದ ಕಾರಭಾರ ನಡೆಸಲಾರಂಭಿಸಿದಳು. ಚೆನ್ನಮ್ಮನ ಕೀರ್ತಿಯಿಂದ ಕಂಗಾಲಾಗಿ, ಸಮಯ ಸಾಧಿಸುತ್ತಿದ್ದ ಬ್ರಿಟಿಷರು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂದು ಕಿತ್ತೂರಿನ ಉತ್ತರಾಧಿಕಾರಿಯನ್ನು ಮಾನ್ಯ ಮಾಡಲಿಲ್ಲ. ಕುಶಾಗ್ರಮತಿಯಾದ ಚೆನ್ನಮ್ಮ ಸಮಸ್ಯೆ ಪರಿಹಾರಕ್ಕೆ ಸುದೀರ್ಘ ಪತ್ರವ್ಯವಹಾರ ನಡೆಸಿದಳು. ಜೊತೆಗೆ ಮುಂದೆ ಉಂಟಾಗಬಹುದಾದ ಪರಿಸ್ಥಿತಿಯನ್ನು ಊಹಿಸಿ ಸಕಲ ಸಿದ್ಧತೆಗಳನ್ನೂ ಮಾಡಿಕೊಂಡಳು. ಕಿತ್ತೂರಿನ ಮಲ್ಲಪ್ಪಶೆಟ್ಟಿ, ವೆಂಕಟರಾಯ ಮತ್ತಿತರರನ್ನು ಬುಟ್ಟಿಗೆ ಹಾಕಿಕೊಂಡ ಆಂಗ್ಲರು ಕಿತ್ತೂರಿನಲ್ಲಿ ನಡೆಯುವ ಘಟನೆಯ ಮೇಲೆ ಹದ್ದಿನ ಕಣ್ಣಿಟ್ಟರು. ಇನ್ನು ತಡಮಾಡಿದರೆ ಕಿತ್ತೂರನ್ನು ಬಗ್ಗಿಸಲು ಸಾಧ್ಯವಿಲ್ಲ ಎಂದು ಅರಿತ ಥ್ಯಾಕರೆ ತನ್ನ ಸುಪರ್ದಿಯಲ್ಲಿದ್ದ ಸೈನ್ಯದೊಂದಿಗೆ 1824ರ ಅಕ್ಟೋಬರ್ 21ರಂದು ಹಠಾತ್ತಾಗಿ ಕಿತ್ತೂರಿನ ಕೋಟೆಯ ಮೇಲೆ ದಾಳಿ ಮಾಡಿದ. ರಾಣಿಯ ಯೋಜನೆ ಸಿದ್ಧವಾಗಿತ್ತು. ಎರಡು–ಮೂರು ದಿನಗಳಾದರೂ ಯಾವುದೇ ಪ್ರತಿಕ್ರಿಯೆ ಬರದಿದ್ದಾಗ ಕೋಟೆಯ ಹೆಬ್ಬಾಗಿಲನ್ನು ಫಿರಂಗಿ ಹಾರಿಸಿ ಒಡೆದು ಒಳನುಗ್ಗಲು ಯತ್ನಿಸಿದ ಥ್ಯಾಕರೆ. ಅಷ್ಟರಲ್ಲೇ ಕಿತ್ತೂರಿನ ಸೈನಿಕರು ಕೋಟೆಯ ಬಾಗಿಲು ತೆಗೆದು ಆಯುಧಪಾಣಿಗಳಾಗಿ ಬ್ರಿಟಿಷರ ಸೈನ್ಯದ ಮೇಲೆರಗಿದರು. ಕಿತ್ತೂರಿನ ಯೋಧ ಅಮಟೂರ ಬಾಳಪ್ಪ ಕೋಟೆಯ ಮೇಲಿಂದ ಥ್ಯಾಕರೆಗೆ ಗುರಿಯಿಟ್ಟು ಗುಂಡು ಹಾರಿಸಿದ. ಥ್ಯಾಕರೆ ಕ್ಷಣಮಾತ್ರದಲ್ಲಿ ಉರುಳಿಬಿದ್ದ. ಸೈನ್ಯ ದಿಕ್ಕಾಪಾಲಾಗಿ ಓಡಿಹೋಯಿತು. ಬ್ರಿಟಿಷರ ಕ್ಯಾಪ್ಟನ್ ಹಾಗೂ ಅನೇಕ ಅಧಿಕಾರಿಗಳು ಮಡಿದರು; ನೂರಾರು ಸೈನಿಕರು ಸೆರೆಸಿಕ್ಕಿದರು. ಸಾಮಾನ್ಯ ಸಂಸ್ಥಾನದ ಮಹಿಳೆಯೊಬ್ಬಳಿಂದ ಬ್ರಿಟಿಷ್ ಮಹಾನ್ ಸಾಮ್ರಾಜ್ಯ ಸೋತಿತ್ತು! ಅವಮಾನ ಅರಗಿಸಿಕೊಳ್ಳಲಾಗದ ಬ್ರಿಟಿಷರು ರಾಣಿಯನ್ನು ಬಗ್ಗುಬಡಿಯಲು ಮದರಾಸು, ಮೈಸೂರು, ಮುಂಬಯಿ, ಸೊಲ್ಲಾಪುರ ಮತ್ತಿತರ ಕಡೆಗಳಿಂದ ಬೃಹತ್ ಸೈನ್ಯವನ್ನು ತರಿಸಿಕೊಂಡಿತು. ಪುನಃ ಕರ್ನಲ್ ಚಾಪ್ಲಿನ್‌ನ ನೇತೃತ್ವದಲ್ಲಿ ಕೋಟೆಯ ಮೇಲೆ ದಾಳಿ ಮಾಡಿತು. ಆದರೆ ರಾಣಿ ಸುಲಭಕ್ಕೆ ಬಗ್ಗುವಳೆ! ಕಿತ್ತೂರಿನ ದತ್ತು ಪುತ್ರನನ್ನು ಮಾನ್ಯ ಮಾಡಿದಲ್ಲಿ ಮಾತ್ರ ಸೈನಿಕರನ್ನು ಬಿಡುಗಡೆಮಾಡುವುದಾಗಿ ಷರತ್ತು ವಿಧಿಸಿ, ಕಿತ್ತೂರಿನ ಕೋಟೆಯ ಒಂದು ಕಲ್ಲು ಉದುರಿದರೂ ಸೆರೆಯಲ್ಲಿರುವ ನಿಮ್ಮ ಸೈನಿಕರ ರುಂಡ ಚೆಂಡಾಡುವುದಾಗಿ ಎಚ್ಚರಿಕೆ ನೀಡಿದಳು. ಬ್ರಿಟಿಷ್ ಸರಕಾರ ಒಪ್ಪಿತು. ಆದರೆ ಇತ್ತ ಸೈನಿಕರು ಬಿಡುಗಡೆಯಾಗುತ್ತಿದ್ದಂತೆ ಮೋಸದಿಂದ ಕೋಟೆಯನ್ನು ಮುತ್ತಿಗೆ ಹಾಕಿದರು. ಕೆರಳಿದ ರಾಣಿ ಸ್ವತಃ ಕತ್ತಿ ಹಿಡಿದು 'ಹರಹರ ಮಹಾದೇವ' ಎಂಬ ಘೋಷಣೆಯನ್ನು ಕೂಗುತ್ತಾ ಸ್ವರಾಷ್ಟ್ರ ರಕ್ಷಣೆಗಾಗಿ ರಣಚಂಡಿಯಂತೆ ಹೋರಾಟ ನಡೆಸಿದಳು. ಅಗಾಧ ಸೈನ್ಯಬಲದ ಆಂಗ್ಲರು ರಾಣಿಯನ್ನು ಬಂಧಿಸಿ ಬೈಲಹೊಂಗಲದ ಸೆರೆಯಲ್ಲಿಟ್ಟರು. ಅಲ್ಲಿಯೇ ಫೆಬ್ರುವರಿ 2, 1829ರಲ್ಲಿ ತನ್ನ 57ನೇ ವಯಸ್ಸಿನಲ್ಲಿ ನಿಧನಳಾದಳು.

## ಸಂಗೊಳ್ಳಿರಾಯಣ್ಣ

ಸಾಮಾನ್ಯ ಗ್ರಾಮದ ತಳವಾರನ ಮಗನಾಗಿ ಹುಟ್ಟಿದ ಸಂಗೊಳ್ಳಿರಾಯಣ್ಣ ಕಿತ್ತೂರಿನ ರಕ್ಷಣೆಗಾಗಿ ಅಸಾಮಾನ್ಯ ಶೌರ್ಯ ತೋರಿದ ಅಪ್ರತಿಮ ಸ್ವಾತಂತ್ರ್ಯಹೋರಾಟಗಾರ. ಕಿತ್ತೂರಿಗೆ ಆಪತ್ತು ಬಂದಿದೆ; ಕೈಜೋಡಿಸುವಂತೆ ರಾಣಿ ಜನರಿಗೆ ಕರೆನೀಡಿದಾಗ, ರಾಯಣ್ಣ ಸೈನ್ಯಕ್ಕೆ ಸೇರಿದ. ಕತ್ತಿ ಹಿಡಿದು ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ರಾಣಿಯೊಂದಿಗೆ ರಾಯಣ್ಣನನ್ನೂ ಬಂಧಿಸಿದ್ದರು. ಆದರೆ ತಾವು ಉದಾರಿಗಳೆಂದು ತೋರಿಸಿಕೊಳ್ಳ ಹೊರಟ ಬ್ರಿಟಿಷರು ಧಾರವಾಡದ ಜೈಲಿನಲ್ಲಿದ್ದ ಕಿತ್ತೂರಿನ ಕೆಲವು ರಾಜಬಂಧಿಗಳನ್ನು ಬಿಡುಗಡೆ ಮಾಡಿದರು. ಇದರಲ್ಲಿ ರಾಯಣ್ಣನೂ ಒಬ್ಬ. ತಾನು ಬಿಡುಗಡೆಯಾದದ್ದು ದೇಶದ ಕಾರ್ಯವನ್ನು ಮಾಡುವುದಕ್ಕಾಗಿಯೇ ಎಂದು ನಿಶ್ಚಯಿಸಿದ ರಾಯಣ್ಣ, 'ಭೂಮಿತಾಯಿಯಾದ ಕಿತ್ತೂರು ಸಂಸ್ಥಾನವನ್ನು, ರಾಜಲಕ್ಷ್ಮಿಯಾದ ಚನ್ನವ್ವೆಯನ್ನು ಮುಕ್ತಗೊಳಿಸುವುದೇ ತನ್ನ ಗುರಿ, ಅದಕ್ಕಾಗಿ ಸೈನ್ಯ ಕಟ್ಟುತ್ತೇನೆ. ಪರಕೀಯರ ಮಗ್ಗಲು ಮುರಿದು, ರಾಣಿಗೆ ಪಟ್ಟಕಟ್ಟುತ್ತೇನೆ' ಎಂಬ ದೃಢ ನಿರ್ಧಾರ ಕೈಗೊಂಡ. ಸ್ವಾತಂತ್ರ್ಯದ ಹೆಸರಿನಲ್ಲಿ ಜನರನ್ನು ಒಂದುಗೂಡಿಸಲು ಓಡಾಟ ಪ್ರಾರಂಭಿಸಿದ. ದಿಕ್ಕಾಪಾಲಾಗಿ ಚದುರಿ ಹೋಗಿದ್ದ ಯೋಧರನ್ನು ಒಂದೆಡೆ ಸೇರಿಸತೊಡಗಿದ. ಆ ಹಳೆಯ ಗೆಳೆಯರನ್ನು ಹುರುದುಂಬಿಸಿ, ಶಸ್ತ್ರಾಸ್ತ್ರ, ಮದ್ದುಗುಂಡುಗಳನ್ನು ಸಂಗ್ರಹಿಸಿದ. ಇದರ ನಡುವೆ ರಾಣಿ ತೀರಿಕೊಂಡ ಸುದ್ದಿ ತಲಪಿತು. ಆದರೆ ರಾಯಣ್ಣ ಎದೆಗುಂದಲಿಲ್ಲ. 'ವ್ಯಕ್ತಿ ಶಾಶ್ವತವಲ್ಲ, ವಿಚಾರ ಶಾಶ್ವತ. ಹಾಗಾಗಿ ರಾಣಿಯ ದತ್ತುಪುತ್ರ ಶಿವಲಿಂಗಪ್ಪರೇ ಕಿತ್ತೂರಿನ ಸಿಂಹಾಸನದ ಹಕ್ಕುದಾರರು' ಎಂದು ಘೋಷಿಸಿದ. ಜನರೂ ರಾಯಣ್ಣನನ್ನು ಹಿಂಬಾಲಿಸಿದರು. ಸುರಪುರದ ಅರಸ ವೆಂಕಪ್ಪನಾಯಕನ ಆಶೀರ್ವಾದ



ಪಡೆದು, ಆತನಿಗೆ ತನ್ನ ಗುರಿಯ ಈಡೇರಿಕೆಗಾಗಿ ಮುನ್ನೂರು ಸೈನಿಕರನ್ನು ನೀಡುವಂತೆ ಕೋರಿಕೊಂಡ. ಪರಮದೇಶಭಕ್ತ, ಅಪ್ರತಿಮ ಸಾಹಸಿಯೂ ಆದ ರಾಯಣ್ಣನ ಬೇಡಿಕೆಯನ್ನು ಪೂರೈಸಿತು. ಹೀಗೆ ಸೈನ್ಯವನ್ನು ಒಟ್ಟುಗೂಡಿಸುತ್ತಾ ಹಿಂತಿರುಗಿ ಊರು ಸೇರವುದರೊಳಗೆ ಸೈನಿಕರ ಸಂಖ್ಯೆ ಒಂದು ಸಾವಿರ ದಾಟಿತ್ತು. ಇನ್ನು ಸುಮ್ಮನಿರಲು ರಾಯಣ್ಣ ಸಿದ್ಧವಿರಲಿಲ್ಲ. ಬ್ರಿಟಿಷರ ಒಂದೊಂದೇ ತಾಲೂಕು ಕೇಂದ್ರಕ್ಕೆ ಮುತ್ತಿಗೆ ಹಾಕಿ ವಶಪಡಿಸಿಕೊಳ್ಳತೊಡಗಿದ. ಕಂಪನಿ ಸರಕಾರಕ್ಕೆ ನಿದ್ದೆ ಹತ್ತಲಿಲ್ಲ. ರಾಯಣ್ಣನ್ನನು ಹಿಡಿದು ತರಲು ಸೈನ್ಯ ಕಳುಹಿಸಿತು. ಇತ್ತ ರಾಯಣ್ಣ ಕಿತ್ತೂರಿಗೆ ನುಗ್ಗಿ ಇಂಗ್ಲಿಷ್ ಸೇನೆಯನ್ನು ಓಡಿಸಿ ತನ್ನ ವಶಕ್ಕೆ ತೆಗೆದುಕೊಂಡ. ಎಚ್ಚೆತ್ತ ಬ್ರಿಟಿಷರು ಸಂಚು ಹೂಡಿದರು. ಕಿತ್ತೂರಿನ ಮೇಲೆ ಅಸಮಾಧಾನ ಹೊಂದಿದ್ದ ಲಿಂಗನಗೌಡ, ವೆಂಕನಗೌಡರ, ಓಲಿಕಾರ ಲಕ್ಕಪ್ಪರನ್ನು ಬ್ರಿಟಿಷರು ತಮ್ಮ ತೆಕ್ಕೆಗೆ ಹಾಕಿಕೊಂಡಿತು. ಲಿಂಗನಗೌಡ ಮತ್ತು ಗೆಳೆಯರು ಚಾಣಾಕ್ಷತನದಿಂದ ರಾಯಣ್ಣನಿಗೆ ಆಪ್ತರಾದರು. ಒಂದು ದಿನ ರಾಯಣ್ಣ ನಿರಾಯುಧನಾಗಿ ಮಲಪ್ರಭಾ ನದಿಯಲ್ಲಿ ಸ್ನಾನಮಾಡಹೊರಟಾಗ ಸಮಯ ಸಾಧಿಸಿ ಮೋಸದಿಂದ ಬಂಧಿಸಿದರು. ಮೊದಲೇ ಬೆಚ್ಚಿಬಿದ್ದಿದ್ದ ಆಂಗ್ಲ ಸರಕಾರ ರಾಯಣ್ಣನನ್ನು ಗಲ್ಲಿಗೇರಿಸಿತು.

## ಕರ್ತಾರ್ ಸಿಂಗ್



1912ರಲ್ಲಿ ಕ್ಯಾಲಿಫೋರ್ನಿಯಾದ ಸ್ಯಾನ್‌ಫ್ರಾನ್ಸಿಸ್ಕೋ ಬಂದರಿನಲ್ಲಿ ಭಾರತದ ಜನ ಹಡಗಿನಿಂದ ಇಳಿಯುತ್ತಿದ್ದರು. ಆಂಗ್ಲ ಅಧಿಕಾರಿ ಎಲ್ಲಿಂದ, ಎಲ್ಲಿಗೆ, ಯಾವೂರು, ಬಂದ ಉದ್ದೇಶ ಎಂದೆಲ್ಲ ಅಸಂಬದ್ಧ ಮತ್ತು ಅನಗತ್ಯ ವಿಚಾರಣೆಯಲ್ಲಿ ನಿರತನಾಗಿದ್ದ. ಹುಡುಗನೊಬ್ಬ ಸಹಪ್ರಯಾಣಿಕನಲ್ಲಿ ಈ ಸಲುವಾಗಿ ವಿಚಾರಿಸಿದಾಗ, "ಭಾರತ, ಗುಲಾಮ ದೇಶ. ಅಲ್ಲಿಯವರನ್ನು ವಿಚಾರಿಸುವ ಕ್ರಮವೇ ಹೀಗೆ" ಅಂದುಬಿಟ್ಟ ಹುಡುಗ. ಆ ಕ್ಷಣದಿಂದಲೇ ಬಿರುಗಾಳಿಯಾಗಿಬಿಟ್ಟ. ವಿದ್ಯಾಭ್ಯಾಸಕ್ಕೆ ಹೋದವ ಕ್ಯಾಲಿಫೋರ್ನಿಯಾದ ಬೀದಿ ಬೀದಿ ಭಾರತೀಯರಿಗಾಗಿ ತಡಕಾಡಿದ. 'ಗದರ್' ಎನ್ನುವ ಪತ್ರಿಕೆ ಹೊರತಂದು ಪಂಜಾಬಿ, ಹಿಂದಿ, ಉರ್ದು, ಗುಜರಾತಿ ಭಾಷೆಗಳಲ್ಲಿ ಪ್ರಸರಣ ಮಾಡಿದ. 20ಸಾವಿರ ತರುಣರ ಕ್ರಾಂತಿಕಾರಿ ಸೇನೆ ಕಟ್ಟಿ ರಾಸಬಿಹಾರಿ ಬೋಸರ ಬಳಿಗೆ ಬಂದು ಇಂಗ್ಲೀಷರನ್ನು ಇನ್ನಿಲ್ಲವಾಗಿಸುವ ತಂತ್ರ ರೂಪಿಸಿದ. ಆತನೇ ಕರ್ತಾರ್ ಸಿಂಗ್. ಭಾರತಕ್ಕೆ ಬಂದು ತಮ್ಮ ಕ್ರಾಂತಿಕಾರಿ ಚಟುವಟಿಕೆಗೆ ಮತ್ತಷ್ಟು ವೇಗ ನೀಡಿದ್ದ. ಸರ್ಗೋಧಾದ ಬಳಿ ಸೈನಿಕ ಡೇರೆಗಳಿಗೆ ಹೋಗಿ ಸೈನಿಕರನ್ನು ಹುರಿದುಂಬಿಸಿ ಬಂಡಾಯದ ಬಾವುಟ ಹಾರಿಸುವ ಪ್ರಯತ್ನ ವಿಫಲವಾದರೂ ಪ್ರಯತ್ನ ನಿರಂತರವಾಗಿ ಮುಂದುವರಿಸಿದ್ದ. ದ್ರೋಹಿಗಳಿಂದ ಹೆಣೆಯಲಾದ ಸಂಚಿಗೆ ಬಲಿಯಾಗಿಬಿಟ್ಟ. ಪೊಲೀಸರು ಬಂಧಿಸಿದರು. ಲಾಹೋರ್ ಪಿತೂರಿ ಕೇಸಿನ ವಿಚಾರಣೆ ಆರಂಭವಾದಾಗ ಕರ್ತಾರ್ ತನ್ನ ಪರ ವಾದಕ್ಕೆ ವಕೀಲರನ್ನೇ ನೇಮಿಸಿಕೊಳ್ಳಲಿಲ್ಲ. ನ್ಯಾಯಾಧೀಶರು 61 ಆಪಾದಿತರಲ್ಲಿ ಕರ್ತಾರನೇ ಪ್ರಮುಖ ಎಂದು ಗುರುತಿಸಿಯಾಗಿತ್ತು. 'ಅಮೆರಿಕದಲ್ಲಿ, ಹಡಗಿನಲ್ಲಿ, ಭಾರತದಲ್ಲಿ ಎಲ್ಲಿಯಾದರೂ ಸರಿ, ಕರ್ತಾರ್ ಕೌಶಲ ತೋರದ ಜಾಗವೇ ಇಲ್ಲ' ಎಂದು ನ್ಯಾಯಾದೀಶನೇ ಉದ್ಗರಿಸಿಬಿಟ್ಟಿದ್ದ. ನೇಣುಗಂಬಕ್ಕೇರುವ ದಿನವೂ ಎದೆಯುಬ್ಬಿಸಿ ಹೆಮ್ಮೆಯಿಂದ ಕವನ ಬರೆಯುತ್ತ ಕೂತಿದ್ದ. ತನ್ನ ಗೆಳೆಯರೊಂದಿಗೆ ನಗುನಗುತ್ತ ನೇಣುಗೆಯ ಚುಂಬಿಸಿ ಭಾರತಮಾತೆಯ ಚರಣಕ್ಕೆ ರುಧಿರ ತೈಲವೆರೆದವನು ಕರ್ತಾರ್ ಸಿಂಗ್.

**ನಿಂತ ನೆಲ ದಾಸ್ಯದ ಧಗೆಯಲ್ಲಿ ಧಗಧಗಿಸುತ್ತದೆ ಎಂದರೆ ಸಾವನ್ನೂ ಸದ್ದಡಗಿಸುವ ಸವಾಲು ಪುಟಿಯದಿರುತ್ತದೆಯೇ? ಮನಸ್ಸು ಮರಣವನ್ನೇ ಲೆಕ್ಕಿಸದೆ ಮಿಡಿಯದೆ ಇರುತ್ತದೆಯೇ? ಸ್ವಾತಂತ್ರ್ಯವೆಂದರೆ ನೆಮ್ಮದಿಯ ನಿಟ್ಟುಸಿರಲ್ಲ; ಬದಲಿಗೆ ಮಾತೃಭೂಮಿಗೆ ತೊಡಿಸಿದ ಸಂಕೋಲೆಗಳನ್ನು ಕಿತ್ತೊಗೆದು ಬಂಧನವನ್ನು ಸಿಗಿದುಹಾಕುವ ಕೆಚ್ಚದು. ಅದಕ್ಕೆ ವಯಸ್ಸು, ಲಿಂಗ, ಜಾತಿ, ಮತಗಳ ಬೇಧವಿಲ್ಲ. ಪ್ರಾಣವನ್ನೇ ಪಣಕ್ಕಿಡುವ, ಮುಯ್ಯಿಗೆ ಮುಯ್ಯಿ ಎಂದು ಕಾದಾಡಿದವರ ಕಲಿತನಗಳಿಂದಲೇ ಭಾರತ ಸ್ವತಂತ್ರ ಪಡೆದಿದೆ. ಸ್ವಾತಂತ್ರ್ಯಾನಂತರ ಬಂದ ಸರ್ಕಾರದ ಷಡ್ಯಂತ್ರಗಳು ಅವೆನ್ನೆಲ್ಲಾ ಮುಚ್ಚಿಹಾಕುವ ಷಡ್ಯಂತ್ರ ನಡೆಸಿರಬಹುದು. ಆದರೆ ರಕ್ತ ತೈಲದ ಸಮರ್ಪಣೆಯ ಧೀಶಕ್ತಿ. ಅವನ್ನೆಲ್ಲಾ ನುಚ್ಚುನೂರು ಮಾಡಿ ಸ್ವಾಭಿಮಾನದ ಕೆಚ್ಚನ್ನು ಭಾರತೀಯರಲ್ಲಿ ಮೂಡಿಸದಿರದು. ಪ್ರಸ್ತುತ ಕಾಲಮಾನದಲ್ಲೂ ಅಕ್ರಮಣಕಾರರು ತಾಯಿ ಭಾರತೀಯ ಇತಿಹಾಸವನ್ನು ನೆನಪಿಸಿಕೊಂಡರೆ ಭವಿಷ್ಯವನ್ನು ಕಂಡು ಬೆಚ್ಚಿ ಬೀಳುತ್ತಾರೆ. ನಿಶ್ಚಿತ. ಇದಕ್ಕೆ ಈ ಬಲಿದಾನಗಳೇ ಪ್ರೇರಣೆ. ಸ್ಫೂರ್ತಿ.**

पुंगव PUNGAVA
# 74, Ranga Rao Road,
Shankarapuram, Bangalore - 560 004.
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALOURU/ GPO on 10/25 of every Month REG.NO.CPMG/KA/BGS/102/2015-17
1-2-2015



# ಅನ್ಯಮತಗಳಿಗೆ ಮತಾಂತರಗೊಂಡ ಹಿಂದುಗಳೇ ಮರಳಿ ಮಾತೃಧರ್ಮಕ್ಕೆ ಬನ್ನಿ : ವಿಹಿಂಪ ಕರೆ

ಮತಾಂತರಗೊಂಡ ಹಿಂದುಗಳನ್ನು ಮರಳಿ ಮಾತೃಧರ್ಮಕ್ಕೆ ಕರೆತರುವ ಪ್ರಯತ್ನ 'ಘರ್ ವಾಪಸಿ' ನಿರಂತರವಾಗಿ ನಡೆಯಲಿದೆ ಎಂದು ವಿಶ್ವ ಹಿಂದು ಪರಿಷತ್ ತಿಳಿಸಿದೆ. ವಿಶ್ವ ಹಿಂದು ಪರಿಷತ್‌ನ ಸುವರ್ಣ ಮಹೋತ್ಸವದ ಅಂಗವಾಗಿ ಕರ್ನಾಟಕದ ಚಿತ್ರದುರ್ಗ, ಪುತ್ತೂರು ಹಾಗೂ ಗೋಣಿಕೊಪ್ಪಲುವಿನಲ್ಲಿ ನಡೆದ ವಿರಾಟ್ ಹಿಂದು ಸಮ್ಮೇಳನದಲ್ಲಿ




ದಿಕ್ಸೂಚಿ ಭಾಷಣ ಮಾಡಿದ ವಿಹಿಂಪದ ಅಖಿಲ ಭಾರತೀಯ ಕಾರ್ಯಾಧ್ಯಕ್ಷ ಪ್ರವೀಣ್‌ಭಾಯಿ ತೊಗಾಡಿಯ ಹೇಳಿದ್ದಾರೆ. ಈಗ ಮತಾಂತರಗೊಂಡ ಹಿಂದೂಗಳನ್ನು ಮರಳಿ ಮಾತೃಧರ್ಮಕ್ಕೆ ಕರೆತರುವ ಪ್ರಯತ್ನವನ್ನು ಮಾತ್ರ ನಾವು ಮಾಡುತ್ತಿದ್ದೇವೆ. ಈಗ ಇದಕ್ಕೆ ಬೊಬ್ಬೆ ಹೊಡೆಯುವ ಅಗತ್ಯವಿಲ್ಲ. ಏಕೆಂದರೆ ಅವರು ಮತಾಂತರವಾಗುವ ವೇಳೆ ಈ ಬೊಬ್ಬೆ ಏಕೆ ಇರಲಿಲ್ಲ ಎಂದು ಪ್ರಶ್ನಿಸಿದರು. ಸುಮಾರು 2000 ವರ್ಷಗಳ ಹಿಂದೆ ಇದು ಹಿಂದೂ ದೇಶವಾಗಿತ್ತು, ಮೆಕ್ಕಾ ಮದೀನ, ರೋಂ ಇತ್ಯಾದಿ ಎಲ್ಲವೂ ನಮ್ಮದೇ ಆಗಿತ್ತು. ಆದರೆ ನಂತರ ಮತಾಂತರ ಹಾಗೂ ಇತರ ಕಾರಣಗಳಿಂದ ಈಗ ಇಲ್ಲವಾಗಿದೆ. ಹಿಂದೂ ಎನ್ನಲೂ ಭಯವಾಗುವ ಪರಿಸ್ಥಿತಿಯಿತ್ತು. ಇನ್ನು ಹಾಗಿಲ್ಲ, ಹಿಂದೂಗಳೆಲ್ಲಾ ಒಂದಾಗಿ ಭವಿಷ್ಯದ ದೃಷ್ಟಿಯಿಂದ ಸಂಘಟಿತರಾಗಬೇಕಾಗಿದೆ' ಎಂದು ಅವರು ಕರೆ ನೀಡಿದರು.



ದೇಶದ ಸುರಕ್ಷತೆ, ಸಮೃದ್ಧಿ ಹಾಗೂ ಗೌರವ ಕಾಪಾಡಲು ಕಟಿಬದ್ಧರಾಗಬೇಕು. ಈ ಹಿನ್ನೆಲೆಯಲ್ಲಿ ಮರು ಮತಾಂತರಕ್ಕೆ ಸಹಾಯ, ಲವ್ ಜಿಹಾದ್‌ಗೆ ಉತ್ತರ, ಸಮಾನ ನೀತಿಸಂಹಿತೆ, ಅಕ್ರಮಗಳಿಗೆ ಕಡಿವಾಣ ಸೇರಿದಂತೆ ಕೆಲ ನಿರ್ಧಾರಗಳನ್ನು ಕೈಗೊಳ್ಳಬೇಕು. ದೇಶದಲ್ಲಿ ವಿವಿಧ ರೀತಿಯಲ್ಲಿ ಜಿಹಾದ್‌ಗಳು ನಡೆಯುತ್ತಿದೆ. ಲವ್ ಜಿಹಾದ್ – ಪ್ರಾಪರ್ಟಿ ಜಿಹಾದ್, ಬಾಂಬ್ ಜಿಹಾದ್, ಆರ್ಥಿಕ ಜಿಹಾದ್ ಹೀಗೆ ವಿವಿಧ ರೀತಿಯಲ್ಲಿ ಜಿಹಾದ್ ನಡಸಿ ದೇಶವನ್ನು ನಾಶ ಮಾಡುವ ಪ್ರಯತ್ನ ನಡೆಯುತ್ತಿದೆ. ಆದರೆ ಇದನ್ನೆಲ್ಲಾ ಮೆಟ್ಟಿ ನಿಲ್ಲಲು ಸಂಕಲ್ಪ ಬದ್ಧರಾಗಬೇಕು ಎಂದರು.

## ಪಟ್ಟಭದ್ರ ಹಿತಾಸಕ್ತಿಗಳಿಂದ ಸಾಮರಸ್ಯ ಪದದ ದುರ್ಬಳಕೆ



"ಇಲ್ಲಿ ಎಲ್ಲ ವರ್ಗದವರೂ ಭಾಗವಹಿಸಿದ್ದೀರಿ. ಯಾವುದೇ ಜಾತಿ ಬೇಧವಿಲ್ಲ. 'ನಾವೆಲ್ಲಾ ಹಿಂದು, ನಾವೆಲ್ಲಾ ಒಂದು' ಎಂಬ ಮನೋಭಾವದಿಂದ ಒಟ್ಟಿಗೆ ಸೇರಿದ್ದೇವೆ. ಆದರೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಸಾಮರಸ್ಯದ ಬಗ್ಗೆ ಮಾತನಾಡುತ್ತಾ ಜನರಲ್ಲಿ ಗೊಂದಲ ಮೂಡಿಸುತ್ತಿದ್ದಾರೆ. ಸಾಮರಸ್ಯ ಎಂಬ ಪದವನ್ನು ಕೆಲವರು ಗುತ್ತಿಗೆ ಹಿಡಿದುಕೊಂಡವರಂತೆ ಮಾತನಾಡುತ್ತಿದ್ದಾರೆ. ಇದಕ್ಕೆ ತಿಲಾಂಜಲಿ ಇಡುವ ಕೆಲಸವಾಗಬೇಕು"

**ಮಾದಾರ ಗುರುಪೀಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ**
**(ಚಿತ್ರದುರ್ಗದ ವಿರಾಟ್ ಹಿಂದು ಸಮ್ಮೇಳನದಲ್ಲಿ)**

## ಹಿಂದು ಎಂದು ಹೇಳಿಕೊಳ್ಳಲು ಹಿಂಜರಿಕೆಯೇಕೆ ?

**"ಹಿಂದೂ ದೇಶದಲ್ಲಿಯೇ, ಹಿಂದೂಗಳೇ ಒಂದಾಗಿ ಎಂದು ಹೇಳುವ ಪರಿಸ್ಥಿತಿ ಒದಗಿರುವುದು ವಿಷಾದದ ಸಂಗತಿ. ಇಂದು ವಿದ್ಯಾವಂತರೇ ಲವ್ ಜಿಹಾದ್, ಕಿಸ್ ಡೇಯಂಥ ಅನಿಷ್ಟ ಪದ್ಧತಿಗಳಿಗೆ ಬಲಿಯಾಗುತ್ತಿದ್ದು, ವ್ಯವಸ್ಥೆ ಹಾಳಾಗಿದೆ. ಮನೆ ಒಡೆಯುವ ಕೆಲಸ ಮಾಡುತ್ತಿದ್ದಾರೆ. ಇದರಿಂದ ಅವಿಭಕ್ತ ಕುಟುಂಬಗಳು ಕಾಣೆಯಾಗಿವೆ. ಹಿಂದು ಧರ್ಮದಲ್ಲಿ ಹುಟ್ಟಿ ಹಿಂದೂಗಳೆಂದು ಹೇಳಿಕೊಳ್ಳಲು ಹಿಂಜರಿಯುತ್ತಿವೆ."**

– ಶ್ರೀ ಶಾಂತವೀರ ಸ್ವಾಮೀಜಿ, ಕುಂಚಿಟಿಗರ ಪೀಠ

# ರಾಮನಗರದ ಸಹನೇಶ್ ಸೇರಿದಂತೆ 24 ಮಕ್ಕಳಿಗೆ ಶೌರ್ಯ ಪ್ರಶಸ್ತಿ

ಕರ್ನಾಟಕದ ರಾಮನಗರ ಜಿಲ್ಲೆ ಕುದೂರಿನ ಬಾಲಕ ಆರ್. ಸಹನೇಶ್ ಸೇರಿದಂತೆ ದೇಶದ ವಿವಿಧ ರಾಜ್ಯಗಳ 24 ಮಕ್ಕಳು ಪ್ರಸಕ್ತ ಸಾಲಿನ ರಾಷ್ಟ್ರೀಯ ಶೌರ್ಯ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಪ್ರಶಸ್ತಿ ಪುರಸ್ಕೃತರಲ್ಲಿ 8 ಬಾಲಕಿಯರು ಮತ್ತು 16 ಬಾಲಕರು ಸೇರಿದ್ದಾರೆ. ಈ ಪೈಕಿ ನಾಲ್ವರು ಮಕ್ಕಳಿಗೆ ಮರಣೋತ್ತರವಾಗಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಜ. 24 ರಂದು ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ. ಪ್ರಶಸ್ತಿ ಪುರಸ್ಕೃತ ಮಕ್ಕಳಿಗೆ ಜ. 26ರಂದು ನವದೆಹಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಪರೇಡ್‌ನ್ನು ವೀಕ್ಷಿಸುವ ಹಾಗೂ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರೊಂದಿಗೆ ವಿಶೇಷ ಔತಣಕೂಟ ಭಾಗವಹಿಸುವ ಅವಕಾಶ ಪಡೆದಿದ್ದಾರೆ.

**ಸಹನೇಶ್ ಸಾಹಸ:** ರಾಮನಗರ ಜಿಲ್ಲೆಯ ಸಹನೇಶ್ (14) ತಮ್ಮ ಸಹಪಾಠಿಗಳೊಂದಿಗೆ ಕಳೆದ (2014) ಜೂನ್ 5ರಂದು ಶಾಲಾ ಪ್ರವಾಸಕ್ಕೆ ತೆರಳಿದ್ದ. ಈ ವೇಳೆ ಅವರಿದ್ದ ಬಸ್ ಮಾಗಡಿ ಬಳಿ ಅಪಘಾತಕ್ಕೆ ಒಳಗಾಗಿತ್ತು. ಅಮೋಘವಾದ ಶೌರ್ಯ ಪ್ರದರ್ಶಿಸಿದ್ದ ಸಹನೇಶ್, ಬಸ್ಸಿನ ಕೆಳಗೆ ಸಿಕ್ಕಿಬಿದ್ದಿದ್ದ 16 ಸಹಪಾಠಿಗಳನ್ನು ಮತ್ತು ಅವರ ಶಿಕ್ಷಕರೊಬ್ಬರನ್ನು ಮೇಲೆತ್ತಿ ಅವರ ಜೀವವನ್ನು ಕಾಪಾಡಿದ್ದ. ಬಸ್ಸಿನ ಕಿಟಕಿಯ ಗಾಜು ಒಡೆದು ಹೊರಬಂದು ಈತ ಶೌರ್ಯ ಪ್ರದರ್ಶಿಸಿದ್ದ. ತನ್ನ ಸೋದರನೇ ಅಪಘಾತದಲ್ಲಿ ಗಾಯಗೊಂಡು ರಕ್ತದ ಮಡುವಿನಲ್ಲಿ ಬಿದ್ದಿದ್ದರೂ ಸಹನೇಶ್ ಧೈರ್ಯಗೆಡದೇ ಸಹನೆ ಪ್ರದರ್ಶಿಸಿದ್ದ. ಆತನ ಈ ಸಾಧನೆಯನ್ನು ಪರಿಗಣಿಸಿ ಶೌರ್ಯ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಇನ್ನು ಆ್ಯಸಿಡ್ ದಾಳಿಯ ನೋವಿನ ಹೊರತಾಗಿಯೂ, ಜೀವನವನ್ನು ಎದುರಿಸುವ ಅಪೂರ್ವವಾದ ಮನೋಶಕ್ತಿಯನ್ನು ಪ್ರದರ್ಶಿಸಿದ ಉತ್ತರಪ್ರದೇಶದ ರೇಷ್ಮಾ ಫತ್ಮಾಗೆ ಭಾರತ್ ಪ್ರಶಸ್ತಿ, ಅಪಹರಣಕಾರರಿಂದ ತನ್ನ ಸ್ನೇಹಿತನನ್ನು ರಕ್ಷಿಸುವಲ್ಲಿ ಅಪರೂಪದ ಸಾಹಸ, ಧೈರ್ಯ ಪ್ರದರ್ಶಿಸಿದ ಅಸ್ಸಾಂನ ಗುಂಜನ್ ಶರ್ಮಾಗೆ ಪ್ರತಿಷ್ಠಿತ ಗೀತಾ ಚೋಪ್ರಾ ಪ್ರಶಸ್ತಿಯನ್ನು ನೀಡಲಾಗಿದೆ. 2014–15ರಲ್ಲಿ ರಾಜ್ಯ ಸರಕಾರದ ಶೌರ್ಯ ಪ್ರಶಸ್ತಿ ಕೂಡಾ ಸಹನೇಶ್ ಭಾಜನರಾಗಿದ್ದಾರೆ. ಈ ಪ್ರಶಸ್ತಿಯು ಪದಕ, ಪ್ರಮಾಣ ಪತ್ರ ಮತ್ತು ನಗದು ರೂಪದಲ್ಲಿದ್ದು, ಕೇಂದ್ರ ಸರಕಾರ ಮಕ್ಕಳ ವಿದ್ಯಾಭ್ಯಾಸಕ್ಕೂ ನೆರವು ಹಾಗೂ ಮೆಡಿಕಲ್, ಇಂಜಿನಿಯರಿಂಗ್ ವಿದ್ಯಾಭ್ಯಾಸಕ್ಕೆ ಇವರಿಗೆ ವಿಶೇಷ ಮೀಸಲಾತಿ ಇದೆ. ಯೋಜನೆಯು 1957ರಲ್ಲಿ ಆರಂಭವಾಗಿದ್ದು ಈವರೆಗೆ 895 ಮಕ್ಕಳಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

# ನಾಗೂರಿ ಭಗೀರಥ ಸಹೋದರರು

ಕುಡಿಯುವ ನೀರಿಗೂ ಸದಾ ಪರದಾಡುವಂತಾಗಿದ್ದ ಬೀದರ್ ಜಿಲ್ಲೆ ಬಾಲ್ಕಿ ತಾಲೂಕಿನ ನಾಗೂರ್(ಕೆ) ಗ್ರಾಮದ ಸುತ್ತ ಈಗ ತರಹೇವಾರಿ ಹೂಗಳು ಅರಳಿ ನಿಂತಿವೆ. ಕಬ್ಬು, ಪಪ್ಪಾಯ, ದಾಳಿಂಬೆ, ತರಕಾರಿ ಬೆಳೆಯುವ ಮೂಲಕ ಪಂಢರಿ, ಮುರಾರಿ, ಬಾಬುರಾವ ಮತ್ತು ಉದ್ಧವ ವರವಟ್ಟೆ ಸಹೋದರರು ಗಮನ ಸೆಳೆದಿದ್ದಾರೆ. ದಶಕದ ಹಿಂದೆ ನೂರಾರು ಎಕರೆ ಜಮೀನಿದ್ದರೂ ಮಾಧವ ರಾವ ವರವಟ್ಟೆ ಕುಟುಂಬ ಲಕ್ಷಾಂತರ ರೂಪಾಯಿಗಳ ಸಾಲದ ಸುಳಿಗೆ ಸಿಲುಕಿತ್ತು. ಓದುವ ವಯಸ್ಸಿನಲ್ಲಿದ್ದ ಸಹೋದರರು ಅರ್ಧದಲ್ಲೇ ಶಾಲೆಯನ್ನು ಬಿಡುವಂಥ ಅನಿವಾರ್ಯತೆ ಎದುರಾಯಿತು. ಕೌಟುಂಬಿಕ ಸಮಸ್ಯೆಗಳನ್ನು ನಿರ್ವಹಿಸಲು ಜಮೀನು ಮಾರಾಟ ಮಾಡಿದರು. ಆದರೆ ಪರಿಸ್ಥಿತಿಯ ಅನಿವಾರ್ಯತೆಗೆ ಶಾಲೆ ಬಿಟ್ಟು ಇದ್ದ ಜಮೀನಿನಲ್ಲೆ ಕೃಷಿಯಲ್ಲಿ ತೊಡಗಿಸಿಕೊಂಡರು. ಆದರೆ ನೀರಿನ ಸಮಸ್ಯೆಯಿಂದ ಕೃಷಿ ಸೊರಗಿತು. ನೀರಿನ ಸಮಸ್ಯೆಗೆ ಮುಕ್ತಿಹಾಡುವ ಉದ್ದೇಶದಿಂದ ಸುಮಾರು 5 ಕಿ.ಮೀ. ದೂರದಲ್ಲಿರುವ ಚಂದಾಪೂರ್ ಬಳಿ ಇತ್ತೀಚೆಗಷ್ಟೇ ನಿರ್ಮಾಣವಾಗಿರುವ ಬ್ರಿಜ್ ಕಂ ಬ್ಯಾರೇಜ್‌ನಿಂದ ಪೈಪ್‌ಲೈನ್ ಅಳವಡಿಸಿ ತಮ್ಮ ಹೊಲಗಳಿಗೆ ನೀರು ಹರಿಸಿಕೊಳ್ಳಲು ನಿಶ್ಚಯಿಸಿದರು. ಊರಿನ ಮನೆಮನೆಗೆ ತೆರಳಿ, ನೆರವಾಗುವಂತೆ ಕೋರಿದರು. ಊರಿನವರ ನೆರವಿನಿಂದ ಕಾರ್ಯಪ್ರವೃತ್ತರಾದರು. ಬ್ಯಾರೇಜ್‌ನ ನದಿ ದಂಡೆಯಲ್ಲೊಂದು ವಿದ್ಯುತ್ ಮೋಟಾರ್ ಅಳವಡಿಸಿದರು. ಅದರಿಂದ ಸಮೀಪದ ಕೃಷಿ ಹೊಂಡವೊಂದರಲ್ಲಿ ನೀರು ಸಂಗ್ರಹಿಸಿ, ನಂತರ ಹೊಂಡದಲ್ಲೊಂದು ಮೋಟಾರ್ ಇಟ್ಟು ಅದರಿಂದ ತಮ್ಮ ಹೊಲಗಳಿಗೆ ಅಗತ್ಯ ನೀರನ್ನು ಎತ್ತುವ ವ್ಯವಸ್ಥೆ ಮಾಡಿದರು. ಇದಕ್ಕೆ ತಗುಲಿದ ವೆಚ್ಚ ಸುಮಾರು 15 ಲಕ್ಷ. ಈ ಭಗೀರಥರ ಸಮನ್ವಯ ಪ್ರಯತ್ನದಿಂದ ಬರದಂಥ ಭೂಮಿಯಲ್ಲಿ ನೀರು ಲಭ್ಯವಾಗಿದೆ. ಸುಮಾರು 90 ಎಕರೆಯಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಸಲಾಗಿದೆ. ಸೆಣಬು ಮತ್ತು ಚಿಕ್ಕ ಕಾರಳ್ (ಚಿಕ್ಕ ಸೂರ್ಯಕಾಂತಿ) ಬಿತ್ತಿದ ತಿಂಗಳ ನಂತರ ಹೊಲವನ್ನು ಬೆಳೆ ಸಮೇತ ಉಳುಮೆ ಮಾಡುವ ಮೂಲಕ ತಮ್ಮ ಜಮೀನಿನಲ್ಲಿ ಫಲವತ್ತತೆ ಕಾಯ್ದುಕೊಳ್ಳುತ್ತಾರೆ. 12 ಎಕರೆ ಕಬ್ಬು, 10 ಎಕರೆ ದಾಳಿಂಬೆ, 11 ಎಕರೆ ಹಸಿಶುಂಠಿ (ಅದರಕ್), 10 ಎಕರೆ ಪಪ್ಪಾಯಿ, 10 ಎಕರೆ ಚೆಂಡು ಮತ್ತು ಸೇವಂತಿ ಹೂ ಬೆಳೆದಿದ್ದಾರೆ. ಇದಕ್ಕೆ ಹೊರತಾಗಿ ಸೋಯಾ, ಹೆಸರು, ಉದ್ದು ಕೂಡಾ ಮಿಶ್ರ ಬೆಳೆಯಾಗಿ ಪಡೆದು ಲಕ್ಷಾಂತರ ರೂಪಾಯಿಗಳ ಲಾಭ ಗಳಿಸಿದ್ದಾರೆ. ಜೊತೆಗೆ ಸುತ್ತಲಿನ ಗ್ರಾಮಗಳ ನೂರಕ್ಕೂ ಹೆಚ್ಚು ಕಾರ್ಮಿಕರಿಗೆ ಕೆಲಸವನ್ನು ಕೊಟ್ಟಿದ್ದಾರೆ.





*ಬೆಂಗಳೂರಿನ ಬನಶಂಕರಿ ಭಾಗದಲ್ಲಿ ಇತ್ತೀಚೆಗೆ ನಡೆದ 'ಬಾಲಕರ ಸಂಚಲನ'ದಲ್ಲಿ 580 ಮಂದಿ ಬಾಲಕರು (6ರಿಂದ 9ನೇ ತರಗತಿ ಒಳಗಿನ) ಭಾಗವಹಿಸಿದ್ದರು*



*ಹುಬ್ಬಳ್ಳಿ ನಗರದಲ್ಲಿ ಜನವರಿ 18ರಂದು ನಡೆದ 'ನಗರ ಸಾಂಘಿಕ್'ನಲ್ಲಿ 872 ಮಂದಿ ಭಾಗವಹಿಸಿದ್ದರು*

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, 74, ರಂಗರಾವ್ ರಸ್ತೆ, ಬೆಂಗಳೂರು–560 004. ☎ : 97391 83021 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19